ನಿಮ್ಮೂರ ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 22 RNI Number : KNKAN/25/A2770 24-01-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :22 ರಾಯಚೂರು 24-01-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಬಳ್ಳಾರಿಯಲ್ಲಿ ರೆಡ್ಡಿ, ಶ್ರೀರಾಮುಲುಗೆ ಸೇರಿದ ಮಾಡೆಲ್ ಹೌಸ್‌ಗೆ ಬೆಂಕಿ

ಬಳ್ಳಾರಿ,ಜ.23-

ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಅವರಿಗೆ ಸೇರಿದ ಜಿ ಸ್ಕೈರ್ ಲೇಔಟ್ ನಲ್ಲಿರುವ ಮಾಡೆಲ್ ಹೌಸ್ ನಲ್ಲಿ ಅಗ್ನಿ ಅವಘಡ ಸಂಭವಿಸಿದೆ. ಪರಿಣಾಮ ಮಾಡೆಲ್ ಹೌಸ್ ಹೊತ್ತಿ ಉರಿದಿದೆ.



ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಮಾಜಿ ಶಾಸಕ ಸೋಮಶೇಖರ್ ರೆಡ್ಡಿ ಪ್ರತಿಕ್ರಿಯೆ ನೀಡಿದರು. 'ನಮ್ಮ ತಾಯಿಯ ಹೆಸರಲ್ಲಿ ಲೇಔಟ್ ಮಾಡಿದ್ದೆವು. ಇಲ್ಲಿ ಜನರಿಗೆ ತೋರಿಸುವುದಕ್ಕಾಗಿ ಮಾಡೆಲ್ ಹೌಸ್ ಕಟ್ಟಿಸಿದ್ದೆವು. ಈ ಮನೆಗೆ ಡಿಸೇಲ್, ಪೆಟ್ರೋಲ್ ಹಾಕಿ 10-15 ಜನರು ಬೆಂಕಿ ಹಚ್ಚಿದ್ದಾರೆ. ಪರಿಣಾಮ ಮನೆಯಲ್ಲಿನ ಎಲ್ಲ ಪಿಠೋಪಕರಣಗಳು ಸುಟ್ಟು ಹೋಗಿವೆ. ಎಲ್ಲ ಗ್ಲಾಸ್ ಪುಡಿಪುಡಿಯಾಗಿದೆ. ಅಗ್ನಿಶಾಮಕ ದಳ ಮತ್ತು ಪೊಲೀಸರು ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದ್ದಾರೆ' ಎಂದು ಸೋಮಶೇಖರ್ ರೆಡ್ಡಿ ತಿಳಿಸಿದ್ದಾರೆ.

ಹೊಸ ವರ್ಷದ ದಿನದ ಗಲಾಟೆಯಲ್ಲಿ ಭಾಗಿಯಾಗಿದ್ದ ಭರತ್ ರೆಡ್ಡಿ ಅವರ ಬೆಂಬಲಿಗರು ಈ ಕೃತ್ಯ ಎಸಗಿದ್ದಾರೆ ಎಂದು ಸೋಮಶೇಖರ್ ರೆಡ್ಡಿ ಆರೋಪಿಸಿದ್ದಾರೆ. ಬೆಂಕಿ ಹಚ್ಚಿದವರನ್ನು ಹಿಡಿಯಲು ನಮ್ಮವರು ಪ್ರಯತ್ನಿಸಿದ್ದಾರೆ. ಆದರೆ ಓರ್ವ ಮಾತ್ರ ಸಿಕ್ಕಿದ್ದು, ಆತನ ಫೋಟೋ ತೆಗೆದುಕೊಂಡಿದ್ದೇವೆ. ಈ ಕುರಿತು ಎಸ್‌ಪಿ ಅವರ ಜೊತೆಗೂ ಮಾತನಾಡಿರುವೆ ಎಂದರು.

ನನಗೆ ಆರೂವರೆ ಗಂಟೆಗೆ ಈ ಬಗ್ಗೆ ಗೊತ್ತಾಗಿದೆ. ಮನೆಯಲ್ಲಿನ ಬಾಗಿಲು, ಕುರ್ಚಿ, ಬೆಡ್ ಸೇರಿದಂತೆ ಎಲ್ಲ ಪಿಠೋಪಕರಣಗಳು ಸುಟ್ಟಿವೆ. ಗ್ಲಾಸ್ ಬಾಗಿಲನ್ನು ಪುಡಿಪುಡಿ ಮಾಡಿದ್ದಾರೆ. ಬಳ್ಳಾರಿ ಭಸ್ಮ ಮಾಡುತ್ತೇನೆಂದು ಶಾಸಕರು ಹೇಳಿದ್ದರು. ಅದರಂತೆ ಅವರ ಬೆಂಬಲಿಗರೇ ಕೃತ್ಯ ಎಸಗಿದ್ದಾರೆ. ಈ ಬಗ್ಗೆ ಪೊಲೀಸರು ಕೂಲಂಕುಷವಾಗಿ ತನಿಖೆ ನಡೆಸಬೇಕಿದೆ ಎಂದು ಸೋಮಶೇಖರ್ ರೆಡ್ಡಿ ಪ್ರತಿಕ್ರಿಯೆ ನೀಡಿದ್ದಾರೆ.

ಶ್ರೀರಾಮುಲು ಹಾಗೂ ಜನಾರ್ದನ ರೆಡ್ಡಿ ಅವರ ಹೆಸರಿನಲ್ಲಿ ಈ ಮಾಡೆಲ್ ಹೌಸ್ ಇದ್ದು, 13-14 ವರ್ಷಗಳ ಹಿಂದೆ ಕಟ್ಟಲಾಗಿದೆ. ಈ ಲೇಔಟ್ ಒಟ್ಟು 109 ಎಕರೆ ವಿಸ್ತಾರ ಹೊಂದಿದೆ.

ಬಿಜೆಪಿ ಪ್ರತಿಭಟನೆ: ಮಾಡೆಲ್ ಹೌಸ್‌ಗೆ ಬೆಂಕಿ ಹಚ್ಚಿದವರನ್ನು ಬಂಧಿಸುವಂತೆ ನಗರದ ರಾಯಲ್ ವೃತ್ತದಲ್ಲಿ ಸೋಮಶೇಖರ್ ರೆಡ್ಡಿ, ಮಾಜಿ ಸಂಸದ ಫಕೀರಪ್ಪ, ಮಾಜಿ ಶಾಸಕ ಸುರೇಶ್ ಬಾಬು ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬೆಂಕಿ ಹಚ್ಚಿದವರನ್ನು ಕೂಡಲೇ ಬಂಧಿಸಬೇಕು. ನ್ಯಾಯ ಸಿಗುವವರೆಗೂ ಹೋರಾಟ ಮುಂದುವರೆಯುತ್ತದೆ ಎಂದು ಪ್ರತಿಭಟನಾಕಾರರು ತಿಳಿಸಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಸ್ಥಳದಲ್ಲಿ ಪೊಲೀಸರು ಬೀಡು ಬಿಟ್ಟಿದ್ದಾರೆ.

ಸಾಲು ಸಾಲು ರಜೆ: ಖಾಸಗಿ ಬಸ್ ಟಿಕೆಟ್ ದರ ದುಪ್ಪಟ್ಟು;ಹೆಚ್ಚುವರಿ ಬಸ್

ಬೆಂಗಳೂರು,ಜ.23-

ಸಾಲು ಸಾಲು ರಜೆ ಇರುವ ಕಾರಣ ಖಾಸಗಿ ಬಸ್ ದರ ಏರಿಕೆಯಾಗಿದ್ದು, ಪ್ರಯಾಣಿಕರ ಜೇಬಿಗೆ ಕತ್ತರಿ ಬಿದ್ದಿದೆ. ಜನವರಿ 24 ರಂದು ನಾಲ್ಕನೇ ಶನಿವಾರ, ಜ.25 ಭಾನುವಾರ ಮತ್ತು ಸೋಮವಾರದಂದು ಗಣರಾಜ್ಯೋತ್ಸವ ನಿಮಿತ್ತ ಸತತ ಮೂರು ದಿನ ರಜೆ ಇದೆ. ಇದರಿಂದ ಶುಕ್ರವಾರ ಸಂಜೆಯಿಂದಲೇ ಬೆಂಗಳೂರಲ್ಲಿರುವ ಜನರು ತಮ್ಮ ತಮ್ಮ ಊರುಗಳತ್ತ ಮುಖ ಮಾಡಿದ್ದಾರೆ. ಇದರಿಂದ ಖಾಸಗಿ ಬಸ್ ದರದಲ್ಲಿ ಭಾರಿ ಹೆಚ್ಚಳವಾಗಿದೆ.




ಖಾಸಗಿ ಬಸ್ ಟಿಕೆಟ್ ದರ ಎರಡು ಪಟ್ಟು ಮತ್ತು ಕೆಲ ಮಾರ್ಗಗಳಲ್ಲಿ ಅದನ್ನೂ ಮೀರಿ ಏರಿಕೆಯಾಗಿದೆ. ಬೆಂಗಳೂರಿನಿಂದ ಮಂಗಳೂರು, ಉಡುಪಿ, ಚಿಕ್ಕಮಗಳೂರು, ಹುಬ್ಬಳ್ಳಿ, ಬೆಳಗಾವಿ, ಶಿವಮೊಗ್ಗ ಮತ್ತು ಕಾರವಾರ ಮಾರ್ಗಗಳ ಬಸ್ ಟಿಕೆಟ್ ದರದಲ್ಲಿ ತೀವ್ರ ಏರಿಕೆ ಕಂಡು ಬಂದಿದೆ. ಸಾಮಾನ್ಯವಾಗಿ ₹500 ರಿಂದ ₹1,200 ಬೆಲೆಯ ಟಿಕೆಟ್‌ಗಳು ಈಗ ₹2,000 ರಿಂದ ₹5,000 ಗೆ ಮಾರಾಟ ಮಾಡಲಾಗುತ್ತಿದೆ. ಹುಬ್ಬಳ್ಳಿ ಮತ್ತು ಬೆಳಗಾವಿಯಂತಹ ಮಾರ್ಗಗಳಲ್ಲಿ ಕೆಲವು ಬಸ್‌ಗಳ ಟಿಕೆಟ್ ದರ ದುಪ್ಪಟ್ಟು ಆಗಿದೆ. ಆದರೂ ಅನಿವಾರ್ಯವಾಗಿ ಅನೇಕ ಪ್ರಯಾಣಿಕರು ಈ ದರ ನೀಡಿ ಪ್ರಯಾಣಿಸಬೇಕಾಗಿದೆ ಅಂತಾರೆ ಪ್ರಯಾಣಿಕರು.

'ಸಾಮಾನ್ಯವಾಗಿ ₹700 ಬೆಲೆಯ ಟಿಕೆಟ್ ಈಗ ₹2,000 ಕ್ಕಿಂತ ಹೆಚ್ಚಾಗಿದೆ. ಪ್ರತಿ ಬಾರಿ ರಜಾ ದಿನಗಳ ವೇಳೆ ಖಾಸಗಿ ಬಸ್‌ಗಳು ಈ ರೀತಿ ಮಾಡುತ್ತವೆ' ಎಂದು ಮಂಗಳೂರಿಗೆ ಪ್ರಯಾಣಿಸುವ ಇಬ್ರಾಹಿಂ ಬೇಸರ ವ್ಯಕ್ತಪಡಿಸಿದ್ದಾರೆ. ಟಿಕೆಟ್ ದರ ಅನಿರೀಕ್ಷಿತ. ನಾವು ಸಾಮಾನ್ಯವಾಗ ಪ್ರಯಾಣಿಸುವಾಗ ಖರ್ಚು ವೆಚ್ಚ ಲೆಕ್ಕ ಮಾಡಿಕೊಂಡಿರುತ್ತೇವೆ. ಆದರೆ, ಈಗ ಎಲ್ಲವೂ ದುಪ್ಪಟ್ಟಾಗುತ್ತದೆ ಎಂದು ಹುಬ್ಬಳ್ಳಿಗೆ ಹೋಗುತ್ತಿರುವ ಮುಜೀಬ್ ಕಳವಳ ವ್ಯಕ್ತಪಡಿಸಿದ್ದಾರೆ.

ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿಯಿಂದ ಹೆಚ್ಚುವರಿ ಬಸ್: ರಜಾ ದಿನಗಳ ಹಿನ್ನೆಲೆ ಪ್ರಯಾಣಿಕರ ಅನುಕೂಲಕ್ಕಾಗಿ ರಾಜ್ಯ ಸಾರಿಗೆ ಇಲಾಖೆಯು ಸರ್ಕಾರಿ ಬಸ್ ಸೇವೆಯನ್ನು ಹೆಚ್ಚಿಸಿದೆ.

3ನೇ ಪುಟಕ್ಕೆ

ಗಿಣಿಗೇರಾರಾಯಚೂರು ರೈಲು ಮಾರ್ಗವನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಿ: ಸಂಸದ ಜಿ ಕುಮಾರ ನಾಯಕ



ಕಲ್ಯಾಣ ಸಂಜೆ ಸುದ್ದಿ

ರಾಯಚೂರು,ಜ.23-

ಇಂದು ಹುಬ್ಬಳ್ಳಿಯಲ್ಲಿ ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಮುಕುಲ್ ಸರನ್ ಮಾಥುರ್ ಅವರನ್ನು ಭೇಟಿ ಮಾಡಿದ ರಾಯಚೂರು ಯಾದಗಿರಿ ಲೋಕಸಭಾ ಕ್ಷೇತ್ರದ ಸಂಸದ ಜಿ ಕುಮಾರ ನಾಯಕರವರು ಗಿಣಿಗೇರಾ ರಾಯಚೂರು ರೈಲು ಮಾರ್ಗವನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸುವ ಕುರಿತು ವಿವರವಾಗಿ ಚರ್ಚೆ ನಡೆಸಿದರು.

ಮಾನ್ವಿ ತಾಲೂಕಿನ ಕುರ್ಡಿಯನ್ನು ಕ್ರಾಸಿಂಗ್ ಸ್ಟೇಷನ್ ಆಗಿ ಅಭಿವೃದ್ಧಿಪಡಿಸುವ ಕುರಿತು ಹಾಗೂ ರಾಯಚೂರು ತಾಲೂಕಿನ ಮಮದಾಪುರವನ್ನು ಗ್ರೇಟರ್ ರಾಯಚೂರು ಸ್ಟೇಷನ್ ಆಗಿ ರೂಪಿಸಿ ಗೂಡ್ಸ್ ಸೈಡಿಂಗ್ ಮತ್ತು ಜ-ಜಂಕ್ಷನ್ ಮೂಲಕ ರಾಯಚೂರು

3ನೇ ಪುಟಕ್ಕೆ

ರಾಯಚೂರು ಉತ್ಸವ2026: ಫೆ.4ರಿಂದ ಹೆಲಿಕ್ಯಾಪ್ಟರ್ ರೈಡ್

ರಾಯಚೂರು, ಜ.23-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿರುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ2026ರ ಅಂಗವಾಗಿ, ಫೆಬ್ರವರಿ 4ರಿಂದ 9ರವರೆಗೆ ರಾಯಚೂರು ಜಿಲ್ಲೆಯ ನಾಗರಿಕರಿಗೆ ಬಾನಂಗಳದಿಂದ ರಾಯಚೂರು ನಗರವನ್ನು ವೀಕ್ಷಿಸುವ ವಿಶೇಷ ''ರಾಯಚೂರು ಬೈಸ್ಕೈ'' ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಹೆಲಿಕ್ಯಾಪ್ಟರ್ ರೈಡ್ ಕಾರ್ಯಕ್ರಮವು ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಪ್ರತಿದಿನ ಬೆಳಗ್ಗೆ 8.00ರಿಂದ ಮಧ್ಯಾಹ್ನ 12.00ರವರೆಗೆ ಹಾಗೂ ಮಧ್ಯಾಹ್ನ 12.30ರಿಂದ ಸಂಜೆ 4.30ರವರೆಗೆ ಲಭ್ಯವಿರುತ್ತದೆ.

ಪ್ರತಿ ಪ್ರಯಾಣಿಕರಿಗೆ ರೂ.3, 500 ಶುಲ್ಕ ನಿಗದಿಪಡಿಸ ಲಾಗಿದ್ದು, 2 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. ಆನ್‌ಲೈನ್ ಟಿಕೆಟ್ ಬುಕ್ಕಿಂಗ್‌ಗಾಗಿ www. helitaxii.com ಅಥವಾ https://share.google/cEDrwhwrhJdOvBFYK ವೆಬ್‌ಸೈಟ್‌ಗಳ ಮೂಲಕ ಬುಕ್ ಮಾಡಬಹುದಾಗಿದೆ. ಆಫ್‌ಲೈನ್ ಟಿಕೆಟ್ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಮೊಬೈಲ್ ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದು: 9482565016, 9448527188, 9611112356, 7676522104, 6362238100 ಈ ಕುರಿತು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಯೋಜನಾ ಸಮಿತಿಯ ಚುನಾವಣೆ, ಫಲಿತಾಂಶ ಪ್ರಕಟ. ವೈ.ಭೂಪನಗೌಡ ಆಯ್ಕೆ



ಸಿರವಾರ,ಜ.23-

ರಾಯಚೂರು ಜಿಲ್ಲಾ ಯೋಜನಾ ಸಮಿತಿಯ ಆರು ಸದಸ್ಯರ ಸ್ಥಾನಗಳಿಗೆ ಜಿಲ್ಲಾ ಪಂಚಾಯತನ ಜಲನಿರ್ಮಲ ಸಭಾಂಗಣದಲ್ಲಿ ನಡೆದ ಚುನಾವಣೆ ಯಶಸ್ವಿಯಾಗಿ ಪೂರ್ಣಗೊಂಡು ಫಲಿತಾಂಶ ಪ್ರಕಟವಾಗಿದೆ ತಾಲೂಕಿನ ಕವಿತಾಳ ಲಿಂಗರಾಜು ಅತಿಹೆಚ್ಚು ಮತ ಪಡೆದರೆ, ಪ.ಪಂ ಮಾಜಿ ಅಧ್ಯಕ್ಷ ವೈ.ಭೂಪನಗೌಡ ಎರಡನೇ ಸ್ಥಾನಪಡೆದಿದ್ದಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜಿಲ್ಲಾ ಯೋಜನಾ ಸಮಿತಿ ಸದಸ್ಯರುಗಳ ಚುನಾವಣೆ) ನಿಯಮಗಳು 1996ರ ಅನ್ವಯ ನಡೆದ ಚುನಾವಣೆಯಲ್ಲಿ ಮತ ಎಣಿಕೆಯ ನಂತರ ಅಭ್ಯರ್ಥಿಗಳಾದ ಲಿಂಗರಾಜ ಬಸವರಾಜ 47, ವೈ. ಭೂಪನಗೌಡ ಬಸವಂತ್ರಾಯ ಗೌಡ 44, ಶರಣಪ್ಪ ಬಸನಗೌಡ ಹೊಸಗೌಡ್ರು 44, ಬಾಪುಗೌಡ ಮಲ್ಲನಗೌಡ ದೇವರಮನಿ 43, ಭರತಕುಮಾರ 40 ಹಾಗೂ ಹುಲಿಗೆಮ್ಮ ಬಸವರಾಜ 39 ಕ್ರಮಬದ್ಧ ಮತಗಳನ್ನು ಪಡೆದು ಜಿಲ್ಲಾ ಯೋಜನಾ ಸಮಿತಿಯ ಸದಸ್ಯರಾಗಿ ಚುನಾಯಿತರಾಗಿದ್ದಾರೆ ಎಂದು ಚುನಾವಣಾಧಿಕಾರಿಗಳು ಘೋಷಿಸಿದರು. ಈ ಚುನಾವಣೆಯು ಅತ್ಯಂತ ಪಾರದರ್ಶಕವಾಗಿ ನಡೆದಿದ್ದು, ನೂತನವಾಗಿ ಆಯ್ಕೆಯಾದ ಸದಸ್ಯರು ಜಿಲ್ಲೆಯ ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ. ಆಯ್ಕೆಯಾದ ಸದಸ್ಯರ ಅಧಿಕೃತ ಪಟ್ಟಿಯನ್ನು ಹಾಗೂ ಅವರು ಪಡೆದ ಮತಗಳ ವಿವರಗಳನ್ನು ಜಿಲ್ಲಾ ಪಂಚಾಯತ್,

3ನೇ ಪುಟಕ್ಕೆ

ರಾಜ್ಯಪಾಲರು ಬಿಜೆಪಿ ಏಜೆಂಟರ್‌ರಂತೆವರ್ತಿಸುತ್ತಿದ್ದಾರೆ-ರಝಾಕ್‌ಉಸ್ತಾದ

ರಾಯಚೂರು,ಜ.23-

ಕರ್ನಾಟಕ ಸರಕಾರ ದೇಶದಲ್ಲಿ ರದ್ದುಪಡಿಸಲಾದ ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ರದ್ದುಗೊಳಿಸಿ, ವಿಕಸಿತ ಭಾರತ ಗ್ಯಾರಂಟಿ ರೋಜಗಾರ್ ಅಜೀವಿಕಾ ಮಿಶನ್ (ಗ್ರಾಮೀಣ) ಯೋಜನೆ (ವಿಬಿ-ಗ್ರಾಮ್ ಜಿ) ಏಕಪಕ್ಷೀಯವಾಗಿ ಜಾರಿಗೊಳಿಸಿರುವದನ್ನು ಚರ್ಚಿಸಲು ವಿಶೇಷ ಅಧಿವೇಶನ ನಡೆಸುತ್ತಿದೆ, ಮಾನ್ಯ ರಾಜ್ಯಪಾಲರು ಸಂವಿಧಾನದ ಆಶಯದಂತೆ ಜಂಟಿ ಸಧನವನ್ನು ಉದ್ದೇಶಿಸಿ ರಾಜ್ಯ ಸರಕಾರ ನೀಡಿದ ಭಾಷಣವನ್ನು ಓದಬೇಕಿತ್ತು, ಅದನ್ನು ದಿಕ್ಕರಿಸಿ ಬಿಜೆಪಿ ಪಕ್ಷದ ಏಜೆಂಟ್ ರೀತಿ ವರ್ತಿಸಿ ಸರಕಾರ ನೀಡಿದ ಭಾಷಣದ ಕೆಲವು ಸಾಲುಗಳನ್ನು ಓದಿ ಸಭೆಯಿಂದ ಹೊರನಡೆದಿದ್ದು ತೀವ್ರವಾಗಿ ಖಂಡಿಸಲಾಗುತ್ತದೆ, ಅವರು ತಮ್ಮ ಮೇಲಿನ ಸಂವಿಧಾನಿಕ ಹ್ರೆಣೆಯನ್ನು ಕಡೆಣಿಸಿದ್ದಾರೆ ಹಾಗೂ ಅವರ ನಡೆಯು ಸಂವಿಧಾನ ವಿರೋಧಿ ಹಾಗೂ ಏಳು ಕೋಟಿ ಕನ್ನಡಿಗರಿಗೆ, ಜನಪ್ರತಿನಿಧಿಗಳ ಸಭೆಗೆ ಮಾಡಿದ ಅವಮಾನವೆಂದು ಭಾವಿಸಲಾಗುತ್ತದೆ ಎಂದು ಕೆಪಿಸಿಸಿ ಮಾಧ್ಯಮ ವಿಭಾಗ ರಾಜ್ಯ ವಕ್ತಾರ ಡಾ.ರಝಾಕ ಉಸ್ತಾದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಾನ್ಯ ರಾಜ್ಯಪಾಲರು ಸಂವಿಧಾನದ ವಿಧಿ 176 ಹಾಗೂ 163ರಂತೆ ಸರಕಾರ ಸಿದ್ದಪಡಿಸಿದ ಭಾಷಣವನ್ನು ರಾಜ್ಯಪಾಲರು ಒದಲೇಬೇಕೆಂಬ ನಿಯಮವಿದೆ, ಆದರೆ ರಾಜ್ಯಪಾಲರು ಸರಕಾರ ಸಿದ್ದಪಡಿಸಿದ ಭಾಷಣ ಓದದೇ ಸಂವಿಧಾನದ ವಿರುದ್ದ ನಡೆದುಕೊಂಡಿದ್ದಾರೆ, ರಾಜ್ಯಪಾಲರು ತಾವೇ ಒಂದು ಸರಕಾರವೆಂದು ಭಾವಿಸಿದ್ದಾರೆ, ಇದು ಜನರಿಂದ ಚುನಾಯಿತ ಸರಕಾರವನ್ನು ಕೇಂದ್ರದಿಂದ ನಿಯಂತ್ರಿಸುವ ಒಂದು ಪ್ರಯತ್ನ ಎಂದು ಹೇಳಬಹುದು. ರಾಜ್ಯಪಾಲರಿಗೆ ನೀಡಿದ ಭಾಷಣದಲ್ಲಿ ಇತ್ತೀಚಿಗೆ ಮನರೇಗಾ ಕಾಯ್ದೆ ರದ್ದುಗೊಳಿಸಿದ ಕೇಂದ್ರ ಸರಕಾರದ ನೀತಿಯ ಬಗ್ಗೆ ಹಾಗೂ ವಿಬಿ-ಗ್ರಾಮ್ ಜಿ ಯೋಜನೆ ಜಾರಿಗೊಳಿಸಿದ ರೀತಿಯ ಬಗ್ಗೆ ವಿರೋಧ ವ್ಯಕ್ತಪಡಿಸಲಾಗಿತ್ತು, ಈ ಭಾಷಣದ ಪ್ರತಿಯನ್ನು ಎಲ್ಲಾ ಶಾಸಕರಿಗೆ ನೀಡಲಾಗಿತ್ತು, ಆದರೆ ರಾಜ್ಯಪಾಲರು ಇದನ್ನು ಓದದೇ ಎರಡು ಸಾಲುಗಳು ಓದಿ ಹೊರನಡೆದಿದ್ದಾರೆ, ಇದು ರಾಜ್ಯಪಾಲರು ಕೇಂದ್ರದ ನಿರ್ಧಾರದಂತೆ ನಡೆದುಕೊಂಡಂತೆ ಕಾಣುತ್ತಿದೆ. ರಾಜ್ಯಪಾಲರ ಇಂತಹ ನಡೆಯು ದೇಶದ ಒಕ್ಕೂಟ ವ್ಯವಸ್ಥೆಗೆ ಮಾರಕವಾಗಿದೆ.

ಕೇಂದ್ರದ ಒಕ್ಕೂಟ ಸರಕಾರ ರಾಜ್ಯಪಾಲರ ಮೂಲಕ ಜನರಿಂದ ಚುನಾಯಿತ ರಾಜ್ಯ ಸರಕಾರಗಳನ್ನು ನಿಯಂತ್ರಣ ಮಾಡುತ್ತಿರುವದು ಖಂಡನೀಯವಾಗಿದೆ, ಇತ್ತೀಚಿಗೆ ಕೇಂದ್ರದ ವಿರೋಧ ಪಕ್ಷಗಳ ಆಡಳಿತದಲ್ಲಿರುವ ರಾಜ್ಯ ಸರಕಾರಗಳನ್ನಿ ಗುರಿಯಾಗಿಸಿರುವದು ಕಾಣುತ್ತಿದೆ, ತಮಿಳನಾಡು, ತೆಲಂಗಾಣ, ಕೇರಳ, ಪಶ್ಚಿಮ ಬಂಗಾಳ, ಪಂಜಾಬ್ ಹಾಗೂ ಇತರೆ ಸರಕಾರಗಳನ್ನು ಗುರಿಯಾಗಿಸಿರುವದು ಕೇಂದ್ರದ ದ್ವಿಮುಖ ನೀತಿಯಾಗಿದೆ. ಕೇಂದ್ರದ ಇಂತಹ ನಡೆಯನ್ನು ಕಾಂಗ್ರೆಸ್ ಪಕ್ಷ ಹಾಗೂ ಸಾರ್ವಜನಿಕರು ತೀವ್ರವಾಗಿ ವಿರೋಧಿಸುತ್ತೇವೆ ಎಂದು ಅವರು ತಿಳಿಸಿದ್ದಾರೆ.

ಅಲ್ಪಸಂಖ್ಯಾತರ ಕನಸಿಗೆ ಸಾಲವೇ ಕೀಲಿಕೈ, ಈಗ ಬೇಕಿದೆ ನೆರವಿನ ಹಸ್ತ: ಸಂಸದ ಜಿ ಕುಮಾರ ನಾಯಕ

ರಾಯಚೂರು,ಜ.23-

ಭಾರತದಲ್ಲಿ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಬದುಕು ಕಟ್ಟಿಕೊಳ್ಳಲು ಒಂದು ಸಹಾಯ ಬೇಕಾಗುತ್ತದೆ. ಅದೇ ಸರಿಯಾದ ಸಮಯಕ್ಕೆ ಕಡಿಮೆ ಬಡ್ಡಿಯಲ್ಲಿಅಗತ್ಯವಾದ ಸಾಲದ (ಕ್ರೆಡಿಟ್) ಲಭ್ಯತೆ. ಶಿಕ್ಷಣ, ಉದ್ಯೋಗ, ಸಣ್ಣ ಉದ್ಯಮ ಎಲ್ಲರಿಗೂ ಹಣ ಬೇಕು. ಆದರೆ ಸಾಲ ಸಿಗದೇ ಹೋದರೆ ಹಲವರ ಕನಸುಗಳು ಅಷ್ಟರಲ್ಲೇ ನಿಂತು ಹೋಗುತ್ತವೆ.

ಇತಿಹಾಸ ನೋಡಿದರೆ ಒಂದು ವಿಷಯ ಸ್ಪಷ್ಟವಾಗುತ್ತದೆ. ಅವಕಾಶ ಸಿಕ್ಕಾಗ ಅಲ್ಪಸಂಖ್ಯಾತ ಸಮುದಾಯದ ಜನರು ದೇಶದ ಬೆಳವಣಿಗೆಯಲ್ಲಿ ದೊಡ್ಡ ಪಾತ್ರವಹಿಸಿದ್ದಾರೆ. ಟಾಟಾ ಸಮೂಹ, ಅಜೀಂ ಪ್ರೇಮ್‌ಜಿ, ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿದ ಕಸ್ತೂರ್ಭಾಯಿ ಲಾಲ್ಭಾಯಿ, ಔಷಧ ಕ್ಷೇತ್ರದಲ್ಲಿ ಕ್ರಾಂತಿ ತಂದ ಯೂಸೂಫ್ ಹಮೀದ್ ಇವರ ಸಾಧನೆಗಳು ನಮ್ಮ ದೇಶದ ಹೆಮ್ಮೆ. ಇದನ್ನು ''ಅಪರೂಪ'' ಎಂದು ನೋಡಬಾರದು. ಅವಕಾಶ ಸಿಕ್ಕರೆ ಪ್ರತಿಭೆ ಮುನ್ನಡೆಯುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ.

ಅಧ್ಯಯನಗಳ ಪ್ರಕಾರ ಹಲವು ಅಲ್ಪಸಂಖ್ಯಾತ ಸಮುದಾಯಗಳು ಇನ್ನೂ ಆರ್ಥಿಕ ಸಂಕಷ್ಟದಲ್ಲೇ



ಇದ್ದಾರೆ. ಇಂತಹವರ ಬದುಕು ಉತ್ತಮವಾಗಲು ಸಾಲ, ದೊಡ್ಡ ಬಲ. ಈ ಉದ್ದೇಶಕ್ಕಾಗಿಯೇ 1994 ರಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಓಒಆಈಅ) ಸ್ಥಾಪಿಸಲಾಯಿತು. ಈ ಸಂಸ್ಥೆಯ ಮೂಲಕ ಅಲ್ಪಸಂಖ್ಯಾತರಿಗೆ ಶಿಕ್ಷಣ, ಸಣ್ಣ ಉದ್ಯಮ, ಸ್ವ-ಉದ್ಯೋಗಕ್ಕೆ ಸಾಲ ಕೊಡಬೇಕು ಎಂಬ ಉದ್ದೇಶವಿತ್ತು.

ಆದರೆ ನೆಲಮಟ್ಟದಲ್ಲಿ ಸಾಲದ ಹರಿವು ಕಡಿಮೆ ಇದೆ ಎಂಬುದು ಸರ್ಕಾರದ ಅಂಕಿಅಂಶಗಳಿಂದಲೇ ತಿಳಿಯುತ್ತದೆ. ಕಳೆದ ಮೂರು ದಶಕಗಳಲ್ಲಿ ?8,800 ಕೋಟಿ ಬಿಡುಗಡೆ ಆದರೂ ಅದರ 75%ಕ್ಕಿಂತ ಹೆಚ್ಚು ಕೇವಲ ಮೂರು ರಾಜ್ಯಗಳಿಗೆಪಶ್ಚಿಮ ಬಂಗಾಳ, ಕೇರಳ ಮತ್ತು ತಮಿಳುನಾಡಿಗೆ ಹೋಗಿದೆ. ಇತರ ಬಹುತೇಕ ರಾಜ್ಯಗಳಿಗೆ ಬಂದ ಹಣ ಸರಾಸರಿಯಲ್ಲಿ ತುಂಬಾ ಕಡಿಮೆ.

ಅಲ್ಪಸಂಖ್ಯಾತ ಜನಸಂಖ್ಯೆ ಹೆಚ್ಚು ಇರುವ ಕರ್ನಾಟಕ ಮತ್ತು ಉತ್ತರ

3ನೇ ಪುಟಕ್ಕೆ

ಹೊಸ ವಂದೇ ಭಾರತ ಸ್ಲೀಪರ್ ಕೋಚ್ ರೈಲುಗಳನ್ನು ಓಡಿಸುವಂತೆ ರೈಲ್ವೆ ಸಚಿವರಿಗೆ ಡಾ.ಬಾಬುರಾವ್ ಆಗ್ರಹ

ರಾಯಚೂರು: ರಾಯಚೂರು ಮಾರ್ಗವಾಗಿ ಹಲವು ಹೊಸ ವಂದೇ ಭಾರತ ಸ್ಲೀಪರ್ ಕೋಚ್ ರೈಲುಗಲನ್ನು ಓಡಿಸಬೇಕೆಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ.ಬಾಬುರಾವ್ ರೈಲ್ವೆ ಸಚಿವರಲ್ಲಿ ಮನವಿ ಮಾಡಿಕೊಂಡಿದ್ದಾರೆ.





ರಾಯಚೂರು, ಯಾದಗಿರಿ, ಕಲಬುರಗಿ ಮಾರ್ಗವಾಗಿ ಬೆಂಗಳೂರಿನಿಂದ ಮುಂಬೈಗೆ, ಚೆನ್ನೈನಿಂದ ಮುಂಬೈಗೆ ರಾಯಚೂರು ಮಾರ್ಗವಾಗಿ, ಬೆಂಗಳೂರಿನಿಂದ ಹೈದ್ರಾಬಾದ್ ಗೆ ರಾಯಚೂರು ಮಾರ್ಗವಾಗಿ, ಹುಬ್ಬಳ್ಳಿಯಿಂದ ರಾಯಚೂರು ಮಾರ್ಗವಾಗಿ ಹೈದ್ರಾಬಾದ್ ಗೆ ವಿಶಾಖಪಟ್ಟಣಂ ನಿಂದ ರಾಯಚೂರು ಮಾರ್ಗವಾಗಿ ಬೆಂಗಳೂರಿಗೆ, ಕಲಬುರಗಿಯಿಂದ ರಾಯಚೂರು ಮಾರ್ಗವಾಗಿ ತಿರುಪತಿಯವರೆಗೂ ಹೊಸ ವಂದೇ ಭಾರತ ಸ್ಲೀಪರ್ ಕೋಚ್ ರೈಲುಗಳನ್ನು ಓಡಿಸುವಂತೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವಿ ಅವರಿಗೂ ಹಾಗೂ ರೈಲ್ವೆ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.

ಸುಪ್ರಸಿದ್ದ ಸುಕ್ಷೇತ್ರ, ಧಾರ್ಮಿಕ ಕೇಂದ್ರ ಗುರುರಾಯರ ಮಂತ್ರಾಲಯಂ, ಹಾಗೂ ಕೃಷ್ಣಾ ಸಮೀಪದ ದತ್ತಾತ್ರೇಯ ದೇವಸ್ಥಾನವೂ ಕೂಡಾ ಭಕ್ತರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿರುವ ಕ್ಷೇತ್ರಗಳಾಗಿವೆ. ಈ ಮಾರ್ಗವಾಗಿ ರೈಲ್ವೆ ಸಂಚಾರಕ್ಕೆ

ಮೂರನೇಯ ಪುಟಕ್ಕೆ



ಬಸ್ ಹರಿದು 4ವರ್ಷದ ಕಂದಮ್ಮ ಸಾವು

ರಾಯಚೂರು,ಜ.23-

ಕೆಕೆಆರ್ಟಿಸಿ ಬಸ್ಸಿಗೆ ಅಚಾನಕ್ಕಾಗಿ ಅಡ್ಡ ಬಂದ ಕಾರಣ ನಾಲ್ಕು ವರ್ಷದ ಕಮಗುವಿನ ಮೇಲೆ ಬಸ್ ಹರಿದು ಸ್ಥಳದಲ್ಲೆ ಮೃತಪಟ್ಟ ಘಟನೆ ದೇವದುರ್ಗ ತಾಲೂಕಿನ ಗಬ್ಬೂರು ಗ್ರಾಮದಲ್ಲಿ ನಡೆದಿದೆ. ಮೃತ ಮಗುವನ್ನು ಗಬ್ಬೂರು ಗ್ರಾಮದ ವಿದ್ಯಾಶ್ರೀ (4) ಎಂದು

ಮೂರನೇಯ ಪುಟಕ್ಕೆ

ಜನವರಿ 26ರಂದು ರಾಯಚೂರು ಜಿಲ್ಲೆಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಪ್ರವಾಸ

ರಾಯಚೂರು,ಜ.23-

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರು ಜನವರಿ 26ರಂದು ರಾಯಚೂರು ಜಿಲ್ಲೆಗೆ ಒಂದು ದಿನದ ಪ್ರವಾಸ ಕೈಗೊಳ್ಳಲಿದ್ದಾರೆ.

ಪ್ರವಾಸ ಕಾರ್ಯಕ್ರಮದ ವಿವರಗಳಂತೆ, ಜನವರಿ 26ರಂದು ಬೆಳಿಗ್ಗೆ 6.10ಕ್ಕೆ ಕಲಬುರಗಿ ನಗರದಿಂದ ನಿರ್ಗಮಿಸುವ ಅವರು ಬೆಳಿಗ್ಗೆ 9.00 ಗಂಟೆಗೆ ರಾಯಚೂರು ನಗರಕ್ಕೆ ಆಗಮಿಸಿ ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಭೇಟಿ ನೀಡಲಿದ್ದಾರೆ. ನಂತರ ಬೆಳಿಗ್ಗೆ 10.00 ಗಂಟೆಗೆ ರಾಯಚೂರಿನಿಂದ ಹೊರಟು ಬೆಳಿಗ್ಗೆ 11.00 ಗಂಟೆಗೆ ದೇವದುರ್ಗ ತಾಲೂಕಿನ ಗಬ್ಬೂರಿನಲ್ಲಿ ನಡೆಯಲಿರುವ ಶ್ರೀಬೂದಿಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿರುವ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 1.45 ಗಂಟೆಗೆ ದೇವದುರ್ಗ ತಾಲೂಕು ಆಸ್ಪತ್ರೆಗೆ ಭೇಟಿ ನೀಡುವರು. ಬಳಿಕ ಮಧ್ಯಾಹ್ನ 3.00 ಗಂಟೆಗೆ ದೇವದುರ್ಗ ಪೊಲೀಸ್ ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಸಂಜೆ 4.30 ಗಂಟೆಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಪೋಸ್ಟ್ ಮೆಟ್ರಿಕ್ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡಲಿದ್ದಾರೆ.

ಸಂಜೆ 5.30 ಗಂಟೆಗೆ ದೇವದುರ್ಗದಿಂದ ನಿರ್ಗಮಿಸಿ ರಾಯಚೂರು ನಗರಕ್ಕೆ ಆಗಮಿಸುವ ಅವರು, ರಾತ್ರಿ 11.10 ಗಂಟೆಗೆ ರಾಯಚೂರಿನಿಂದ ರೈಲು ಮಾರ್ಗವಾಗಿ ರಾಜ್ಯ ರಾಜಧಾನಿ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.26ರಂದು ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

ರಾಯಚೂರು,ಜ.23-

ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಜನವರಿ 26 ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಿಗ್ಗೆ 9ಬಗಂಟೆಗೆ ನಗರದ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ವತಿಯಿಂದ ಏರ್ಪಡಿಸಲಾದ ಗಣರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ10.30ಕ್ಕೆ ನಗರದ ನೂತನ

3ನೇ ಪುಟಕ್ಕೆ



ಸಂತಪೂರ ಹೋಬಳಿಯಲ್ಲಿ ಶಾಸಕ ಪ್ರಭು ಚವ್ಹಾಣ ಗ್ರಾಮ ಸಂಚಾರ

ಔರಾದ್,ಜ.23-

ವಯೋವೃದ್ಧರ ಅಹವಾಲುಗಳಿಗೆ ತಕ್ಷಣ ಸ್ಪಂದಿಸಬೇಕೆಂದು ಮಾಜಿ ಸಚಿವರು ಹಾಗೂ ಔರಾದ (ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಔರಾದ(ಬಿ) ತಾಲ್ಲೂಕಿನ ಬೋರಾಳ, ತುಳಜಾಪೂರ, ಎಕಲಾರ, ಕೊಳ್ಳೂರ, ಬರ್ದಾಪೂರ, ಲಿಂಗದಳ್ಳಿ, ನಾಗೂರ(ಎನ್), ನಾಗೂರ(ಎಂ), ಬೋರ್ಗಿ(ಜೆ) ಗ್ರಾಮಗಳಲ್ಲಿ ಜ.21ರಂದು ಗ್ರಾಮ ಸಂಚಾರ ನಡೆಸಿ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದರು.

ಈ ವೇಳೆ ವಯೋವೃದ್ಧರು ವೃದ್ಧಾಪ್ಯ ವೇತನ, ಆರೋಗ್ಯ ಸೇವೆ, ಪಿಂಚಣಿ, ಗುರುತಿನ ಚೀಟಿ, ವಸತಿ ಹಾಗೂ ಮತ್ತಿತರೆ ಮೂಲಭೂತ ಸೌಲಭ್ಯಗಳ ಕುರಿತು ಶಾಸಕರ ಎದುರು ಪ್ರಸ್ತಾಪಿಸಿದರು. ಎಲ್ಲರ ಸಮಸ್ಯೆಗಳಿಗೆ ಸ್ಪಂದಿಸಿದ ಶಾಸಕರು, ವಯೋವೃದ್ಧರು ಸಮಾಜದ ಅಮೂಲ್ಯ ಆಸ್ತಿಯಾಗಿದ್ದು, ಅವರ ಸಮಸ್ಯೆಗಳನ್ನು ನಿರ್ಲಕ್ಷ್ಯ ಮಾಡಬಾರದೆಂದು ಹೇಳಿದರು.

ವಯೋವೃದ್ಧರು ಕಛೇರಿಗಳಿಗೆ ಅಲೆದಾಡುವ ಸ್ಥಿತಿಯಲ್ಲಿ ಇರುವುದಿಲ್ಲ ಏನಾದರೂ ಸಮಸ್ಯೆಗಳನ್ನಿಟ್ಟುಕೊಂಡು ಕಛೇರಿಗೆ ಬಂದಾಗ ಅವರಿಗೆ ತಕ್ಷಣ ಸ್ಪಂದಿಸಬೇಕು. ಅವರ ಅರ್ಜಿಗಳು ಹಾಗೂ ಸಮಸ್ಯೆಗಳಿಗೆ ತಕ್ಷಣ ಪರಿಹಾರ ಕಲ್ಪಿಸಬೇಕು. ಒಂದೇ ಬಾರಿಗೆ ಸಮಸ್ಯೆ ಪರಿಹರಿಸಲು ಪ್ರಯತ್ನಿಸಬೇಕು. ಸರ್ಕಾರದ ವಿವಿಧ ಯೋಜನೆಗಳ ಲಾಭವನ್ನು ತಲುಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕೆಂದು ನಿರ್ದೇಶನ ನೀಡಿದರು.

ಹೆಬ್ಬೆರಳು ಗುರುತು ನೀಡಲು ವಯೋವೃದ್ಧರಿಗೆ ಸಾಧ್ಯವಾಗುತ್ತಿಲ್ಲ. ಹಾಗಾಗಿ ಪಡಿತರ ಕೊಡುತ್ತಿಲ್ಲವೆಂದು ಬರ್ದಾಪೂರ ಗ್ರಾಮದ ಹಿರಿಯ ಮಹಿಳೆಯರು ಶಾಸಕರ ಗಮನಕ್ಕೆ ತಂದಾಗ, ಈ ರೀತಿಯ ಸಮಸ್ಯೆಯಿರುವವರ ಪಟ್ಟಿ ಮಾಡಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಪಡಿತರ ಕಲ್ಪಿಸಲು ಕ್ರಮ ವಹಿಸಬೇಕೆಂದು ತಹಸೀಲ್ದಾರರಿಗೆ ನಿರ್ದೇಶನ ನೀಡಿದರು.

ಗ್ರಾಮ ಸಂಚಾರದಲ್ಲಿ ಬಹಳಷ್ಟು ಗ್ರಾಮಗಳಲ್ಲಿ ಅನೇಕ ರೈತರು ಬೆಳೆ ಹಾನಿ ಪರಿಹಾರ ಸಿಕ್ಕಿಲ್ಲವೆಂದು ದೂರುಗಳನ್ನು ನೀಡುತ್ತಿದ್ದಾರೆ. ಸರ್ಕಾರದ ಪರಿಹಾರ ಸಿಗದ ರೈತರ ವಿವರಗಳನ್ನು ಪಡೆದು ಏಕೆ ಪರಿಹಾರ ಸಿಕ್ಕಿಲ್ಲವೆಂದು ಗುರುತಿಸಿ ಪರಿಹಾರಧನ ಪಾವತಿಸಲು ಕ್ರಮ ವಹಿಸಬೇಕು. ಮುಂದಿನ ದಿನಗಳಲ್ಲಿ ಇಂತಹ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳಬೇಕೆಂದು ಕೃಷಿ ಮತ್ತು ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಮಹೇಶ ಪಾಟೀಲ, ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಜೆ ರಂಗೇಶ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಗಾಯತ್ರಿ, ಲೋಕೋಪಯೋಗಿ ಉಲಾಖೆ ಎಇಇ ಪ್ರೇಮಸಾಗರ, ಪಂಚಾಯತ ರಾಜ್ ಎಂಜಿನಿಯರಿಂಗ್ ಇಲಾಖೆ ಎಇಇ ಸುನೀಲ ಚಿಲ್ಲರ್ಗೆ, ಮುಖಂಡರಾದ ಶಿವಾಜಿರಾವ ಪಾಟೀಲ ಮುಂಗನಾಳ, ಶಿವರಾಜ ಅಲ್ಮಾಜೆ, ಸಚಿನ ರಾಠೋಡ, ರಾಜಪ್ಪ ಸೋರಳ್ಳಿ, ಸಂಗಮೇಶ ಬೋರ್ಗಿ, ಬಜರಂಗ ಪಾಂಡ್ರೆ, ಬಾಬುರಾವ ಶೆಟ್ಟೆಪ್ಪ, ವಿವೇಕ ದ್ಯಾಡೆ ಹಾಗೂ ಮತ್ತಿತರರು ಇದ್ದರು.

ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ಅಕ್ಕ ಪಡೆ

ಬಳ್ಳಾರಿ,ಜ.23-

ಜಿಲ್ಲೆಯಲ್ಲಿ ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ಅಕ್ಕಪಡೆ ಯೋಜನೆ ಅನುಷ್ಠಾನಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರುಗಳ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಅಕ್ಕ ಪಡೆ ಯೋಜನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಮಹಿಳೆ ಮತ್ತು ಮಕ್ಕಳಿಗಿರುವ ಹಕ್ಕುಗಳು, ಕಾನೂನುಗಳ ಅರಿವು ಮೂಡಿಸುವುದು ಮತ್ತು ಅವು ಉಲ್ಲಂಘನೆಯಾದಲ್ಲಿ ಅವರು ನ್ಯಾಯ ಪಡೆಯಲು ಇರುವ ವಿಧಾನಗಳ ಕುರಿತು ಅರಿವು ಮೂಡಿಸುವ ಉದ್ದೇಶ ಹೊಂದಲಾಗಿದೆ ಎಂದರು.

ಶಿಕ್ಷಣದ ಬುನಾದಿ ಆರಂಭವಾಗುವುದು ಮನೆಯಿಂದ. ಮನೆಯಲ್ಲಿಯೇ ಪೋಕ್ಸೋ, ಬಾಲ್ಯವಿವಾಹ ಸೇರಿದಂತೆ ಅನಿಷ್ಟ ಪದ್ಧತಿಗಳ ಕುರಿತು ಅರಿವು ಮೂಡಿಸಬೇಕು. ಜಿಲ್ಲೆಯಲ್ಲಿ ಅಕ್ಕಪಡೆ ಯೋಜನೆಯು ಸಾಕಾರಗೊಳ್ಳಬೇಕು ಎಂದು ಆಶಿಸಿದ ಅವರು, ಇದಕ್ಕೆ ಬೇಕಾದ ಪೂರಕ ಸಹಕಾರ ಜಿಲ್ಲಾಡಳಿತ ನೀಡಲಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಸುಮನ್ ಡಿ ಪೆನ್ನೇಕರ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ದೌರ್ಜನ್ಯಕ್ಕೊಳಗಾದ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣದ ಸಹಾಯ, ಕಾನೂನು ಜಾಗೃತಿ ಮತ್ತು ಸಲಹೆ ನೀಡುವುದು ಅಕ್ಕಪಡೆ ಯೋಜನೆಯ ಕಾರ್ಯವಾಗಿದೆ. ಇದರ ಮೇಲ್ವಿಚಾರಣೆಗಾಗಿ ಪರಿಶೀಲನಾ ಸಮಿತಿ ರಚಿಸಲಾಗಿದ್ದು, ಪ್ರತಿ ಮೂರು ತಿಂಗಳಿಗೊಮ್ಮೆ ವರದಿಯ ಪರಿಶೀಲನೆ ನಡೆಸಲಾಗುವುದು. ಇದರಿಂದ ಇನ್ನು ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.



ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಮಾತನಾಡಿ, ಅಕ್ಕ ಎಂದರೆ ಒಬ್ಬ ಸ್ತ್ರೀ, ತಾಯಿ, ಅಕ್ಕ, ಮಗಳು ಎಲ್ಲವೂ. ಮಹಿಳೆಯರ ಸುರಕ್ಷತೆ - ಸಮಾಜದ ಜವಾಬ್ದಾರಿ. ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವ ಕೌಟುಂಬಿಕ ಹಿಂಸೆ, ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ, ಮಹಿಳಾ ಕಳ್ಳಸಾಗಣೆ ಸೇರಿದಂತೆ ಸಾಮಾಜಿಕ ಕೆಡುಕುಗಳನ್ನು ತಡೆಯಲು ಅಕ್ಕ ಪಡೆ ಒಂದು ಸಮುದಾಯ ಆಧಾರಿತ ರಕ್ಷಣಾ ಪಡೆಯಾಗಿದೆ ಎಂದರು.

ರಸ್ತೆ ಅಪಘಾತಗಳಿಂದಾಗಿ ಪ್ರತಿ ವರ್ಷ ಲಕ್ಷಾಂತರ ಜನರು ತಮ್ಮ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಸಾರ್ವಜನಿಕರು ರಸ್ತೆ ಸಂಚಾರ ನಿಯಮಗಳ ಅರಿವು, ರಸ್ತೆಗಳಲ್ಲಿ ಸುರಕ್ಷಿತ ಸಂಚಾರ ಕುರಿತು ಜಾಗೃತಿ ಹೊಂದಬೇಕು. ಅಪಘಾತ ಪ್ರಕರಣಗಳನ್ನು ಕಡಿಮೆಗೊಳಿಸಲು ಮತ್ತು ರಸ್ತೆಗಳಲ್ಲಿ ಸುರಕ್ಷಿತವಾಗಿ ಸಂಚರಿಸುವ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಇಲಾಖೆಗಳ ಸಹಭಾಗಿತ್ವದೊಂದಿಗೆ ಜ.30 ರ ವರೆಗೆ ರಸ್ತೆ ಸುರಕ್ಷತಾ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್ ಅವರು ಮಾತನಾಡಿ, ಅಪರಾಧ ನಡೆಯುವುದಕ್ಕೂ ಮುನ್ನ ಮುನ್ನೆಚ್ಚರಿಕೆ ವಹಿಸುವುದು ಬಹಳ ಮುಖ್ಯ. ಹಾಗಾಗಿ ಎಲ್ಲಾ ಇಲಾಖೆಗಳ ಸಹಕಾರದೊಂದಿಗೆ ಪೋಕ್ಸೋ, ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮ ಕುರಿತು ಅರಿವು ಮೂಡಿಸುವ ಕಾರ್ಯವಾಗಬೇಕಿದೆ ಎಂದರು.

ಜಿಲ್ಲೆಯಲ್ಲಿ ಬಾಲ್ಯವಿವಾಹ, ಅಪ್ರಾಪ್ತ ಬಾಲಗರ್ಭಿಣಿ ಪ್ರಕರಣಗಳಿಗೆ ಕಡಿವಾಣ ಹಾಕಬೇಕು. ಈ ಕುರಿತು ಪ್ರಕರಣ ಹೆಚ್ಚು ಕಂಡುಬರುವ ತಾಲ್ಲೂಕುಗಳಲ್ಲಿ ಜಾಗೃತಿ ನೀಡಬೇಕು. ಇದಕ್ಕೆ ಗಸ್ತು ಪಡೆ ನಡೆಸಬೇಕು. ಅಕ್ಕಪಡೆ ಯೋಜನೆಯು ಯಶಸ್ವಿಯಾಗಿ ಅನುಷ್ಠಾನಗೊಳ್ಳಲು ಎಲ್ಲಾ ಇಲಾಖೆಗಳ ಸಹಕಾರವೂ ಅಗತ್ಯವಾಗಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ.ಎಂ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮಹಿಳೆಯರು ಮತ್ತು ಮಕ್ಕಳ ಮೇಲಿನ ಹಿಂಸಾಚಾರವನ್ನು ತಡೆಗಟ್ಟಲು ಮಹಿಳಾ ಸುರಕ್ಷತೆ ಮತ್ತು ರಕ್ಷಣೆಗಾಗಿ ರಾಜ್ಯ ಸರ್ಕಾರವು ಅಕ್ಕಪಡೆ ಯೋಜನೆ ಜಾರಿ ತರಲಾಯಿತು. ಕಳೆದ ನವೆಂಬರ್ ತಿಂಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಚಾಲನೆ ನೀಡಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನೇತೃತ್ವದಲ್ಲಿ ಈ ಉಪಕ್ರಮವು ಪೊಲೀಸ್, ಗೃಹ ರಕ್ಷಕ ಸಿಬ್ಬಂದಿ ಮತ್ತು ತರಬೇತಿ ಪಡೆದ ಎನ್‌ಎಸ್‌ಸಿ ಕೆಡೆಟ್‌ಗಳ ತಂಡಗಳನ್ನು ಒಳಗೊಂಡಿದ್ದು, ನಾಲ್ಕು ಮಹಿಳಾ ಸಿಬ್ಬಂದಿ ಒಳಗೊಂಡ ವಾಹನ ಸಾರ್ವಜನಿಕ ಸ್ಥಳಗಳಲ್ಲಿ ಪಾಳಿ ವೇಳೆಯಲ್ಲಿ ಗಸ್ತು ತಿರುಗುತ್ತದೆ ಎಂದರು.

ಸಮುದಾಯಗಳಲ್ಲಿ ಕೌಟುಂಬಿಕ ಹಿಂಸೆ, ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ, ಮಹಿಳಾ ಕಳ್ಳಸಾಗಾಣೆ ಸೇರಿದಂತೆ ಇತರೆ ಅಪರಾಧ ಚಟುವಟಿಕೆ ಕಂಡುಬಂದಲ್ಲಿ ತುರ್ತು ಸಹಾಯವಾಣಿ-112, ಮಹಿಳಾ ಸಹಾಯವಾಣಿ-181 ಮತ್ತು ಮಕ್ಕಳ ಸಹಾಯವಾಣಿ-1098 ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದರು.

ಮಕ್ಕಳ ವಿಶೇಷ ಘಟಕದ ನೋಡೆಲ್ ಅಧಿಕಾರಿಯೂ ಆದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಪಿ ರವಿ ಕುಮಾರ್ ಅವರು ಗಣ್ಯರನ್ನು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಅಕ್ಕಪಡೆ ಯೋಜನೆಯ ಭಿತ್ತಿಪತ್ರ ಅನಾವರಣಗೊಳಿಸಲಾಯಿತು. ರಸ್ತೆ ಸುರಕ್ಷತಾ ಜಾಗೃತಿ ಅಭಿಯಾನ ಹಾಗೂ ಅಕ್ಕಪಡೆ ಗಸ್ತು ವಾಹನಕ್ಕೆ ಚಾಲನೆ ನೀಡಿದರು.

ಈ ವೇಳೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್.ಎನ್., ಗೃಹರಕ್ಷಕ ದಳದ ಜಿಲ್ಲಾ ಕಮಾಂಡೆಂಟ್ ಶೇಕ್ ಸಾಬ್, ಪದವಿ ಪೂರ್ವ ಶಿಕ್ಷಣಾ ಇಲಾಖೆಯ ಉಪನಿರ್ದೇಶಕ ಲಕ್ಷ್ಮಣ್ ಹಳ್ಳದಮನೆ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ.ಕೆ., ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುಭದ್ರ, ದೇವಿ, ಮಹಿಳಾ ಪೊಲೀಸ್ ಠಾಣೆಯ ಆರಕ್ಷಕ ಉಪ ನೀರಿಕ್ಷಕ ರಮೇಶ್ ಕುಲಕರ್ಣಿ ಸೇರಿದಂತೆ ಪೊಲೀಸ್ ಅಧಿಕಾರಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿ, ಸಿಬ್ಬಂದಿ, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಆಧ್ಯಾತ್ಮ ಸಾಧನೆಗೆ ಭಗವಂತನ ಸ್ಮರಣೆಗೆ ಸಮಯವಿಲ್ಲ

ಭಾಲ್ಕಿ,ಜ.23-

ಮಾನವನ ಬದುಕು ಸಂಪತ್ತಿನಿಂದ ಕೂಡಿದ್ದರೂ ಶಾಂತಿ ಇಲ್ಲದಂತಾಗಿದೆ. ಸಿರಿ ಸಂಪದ ಗಳಿಸಲು ಉಳಿಸಲು ಮತ್ತು ಕುಡಿಯಲು ಸೇದಲು ಬೇಕಾದಷ್ಟು ಸಮಯವಿದೆ. ಆದರೆ ಆಧ್ಯಾತ್ಮ ಸಾಧನೆಗೆ ಮತ್ತು ಭಗವಂತನ ಸ್ಮರಣೆಗೆ ಮಾತ್ರ ಸಮಯ ಇಲ್ಲದಂತಾಗಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಬುಧವಾರ ತಾಲೂಕಿನ ಮೇಹಕರ ಕಟ್ಟಿಮನಿ ಹಿರೇಮಠದ ಸಭಾಂಗಣದಲ್ಲಿ ತಮ್ಮ 35ನೇ ವರ್ಷದ ಪೀಠಾರೋಹಣ ವರ್ಧಂತಿ ಮಹೋತ್ಸವ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಭೌತಿಕ ಜೀವನ ಸಮೃದ್ಧಗೊಂಡರೆ ಸಾಲದು. ಆಂತರಿಕ ಜೀವನ ಪರಿಶುದ್ಧಗೊಳ್ಳಬೇಕಾಗಿದೆ. ಸತ್ಯ ಸುಂದರ ಸಂಸ್ಕೃತಿಯ ಅರಿವಿನಿಂದ ಮನುಷ್ಯನ ಬದುಕು ಬಲಗೊಳ್ಳಬೇಕು. ಸಕಲ ಜೀವಾತ್ಮರಿಗೂ ಒಳಿತನ್ನು ಬಯಸಿದ ವೀರಶೈವ ಧರ್ಮ ಉಗಮ, ಉತ್ಥಾನ, ಪುನರುತ್ಥಾನ ಮತ್ತು ಜಾಗೃತಿ ಎಂದು ನಾಲ್ಕು ಹಂತಗಳಲ್ಲಿ ಬೆಳೆದು ಬಂದಿರುವುದನ್ನು ಮರೆಯಬಾರದು. ಮಾನವೀಯ ಸಂಬಂಧಗಳನ್ನು ಬೆಳೆಸುವ ಶಕ್ತಿ ಧರ್ಮಕ್ಕಿದೆ ಹೊರತು ಬೇರಾವುದಕ್ಕೂ ಇಲ್ಲವೆಂದು

ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ. ಪೀಠಾರೋಹಣದ 34 ಸಂವತ್ಸರ ಕಳೆದು ಇಂದು 35ನೇ ವರ್ಷದಲ್ಲಿ ಪಾದಾರ್ಪಣೆ ಮಾಡಿ ಮುನ್ನಡೆಯುತ್ತಿರುವುದು ಪೂರ್ವಾಚಾರ್ಯರ ಕೃಪಾ ಕಾರುಣ್ಯ ಕಾರಣವೆಂದರೆ ತಪ್ಪಾಗದು. ಹಲವಾರು ರಚನಾತ್ಮಕ ಮತ್ತು ಗುಣಾತ್ಮಕ ಕಾರ್ಯಗಳನ್ನು



ಕೈಗೊಂಡಿರುವುದು ತಮಗೆ ತೃಪ್ತಿ ತಂದಿದೆ ಎಂದ ಜಗದ್ಗುರುಗಳು ಭವಿಷ್ಯತ್ತಿನ ದಿನಗಳಲ್ಲಿ ನರ ನಾಡಿಗಳಲ್ಲಿ ಶಕ್ತಿ ಇರುವ ತನಕ ಧರ್ಮ-ಸಂಸ್ಕೃತಿ ಮತ್ತು ಪರಂಪರೆಯ ಸಂವರ್ಧನೆಗಾಗಿ ಶ್ರಮಿಸುತ್ತೇವೆ ಎಂದರು.

ನೇತೃತ್ವ ವಹಿಸಿದ ಮೇಹಕರ ಹಿರೇಮಠದ ರಾಜೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಬೆಂಕಿಯಲ್ಲಿ ಸುಡುತ್ತಿದ್ದರೂ ಚಿನ್ನ ಕಪ್ಪಾಗದೇ ಹೊಳೆಯುತ್ತದೆ. ಸಜ್ಜನರ ಸತ್ಪುರುಷರ ಬಾಳು ಸಹ ಹಾಗೆಯೇ. ಒಳ್ಳೆಯವರನ್ನು ನಿಂದಿಸುವವರು ಆಗಸಕ್ಕೆ ಉಗುಳಿದಂತೆ ನಿಷ್ಫಲವಾಗುತ್ತದೆ. ಅರ್ಥವಿಲ್ಲದ ಬದುಕು ಆಚರಣೆ ಇಲ್ಲದ ಜೀವನ, ಹೃದಯ ಸಾಮರಸ್ಯ ಇಲ್ಲದ ನಡೆ ಮನುಷ್ಯನಲ್ಲಿ ಇರಬಾರದು. ಶ್ರೀ ರಂಭಾಪುರಿ ಜಗದ್ಗುರುಗಳು ಭಾವ ಶ್ರೀಮಂತಿಕೆ ಹೊಂದಿ ಧರ್ಮ ಸಂಸ್ಕೃತಿಯ ಪುನರುತ್ಥಾನಕ್ಕೆ ಸದಾ ಶ್ರಮಿಸುತ್ತಾ ಬಂದಿದ್ದಾರೆ. ಅವರ ಪೀಠಾರೋಹಣದ 35ನೇ ವರ್ಷದ ವರ್ಧಂತಿ ಮಹೋತ್ಸವ ಮೇಹಕರ ಹಿರೇಮಠದಲ್ಲಿ ಜರುಗುತ್ತಿರುವುದು ಭಕ್ತರ ಸೌಭಾಗ್ಯವೆಂದರೆ ತಪ್ಪಾಗದು. ಅವರ ಪೀಠಾರೋಹಣದ ಸುವರ್ಣ ಮಹೋತ್ಸವ ಮತ್ತು ಜನ್ಮ ಶತಮಾನೋತ್ಸವ ಆಚರಿಸುವ ಸೇವಾ ಭಾಗ್ಯ ಭಕ್ತರಿಗೆ ಬರುವಂತಾಗಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸಿದರು.

ಹುಡುಗಿ ಹಿರೇಮಠದ ವಯೋವೃದ್ಧರಾದ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು ಜ್ಯೋತಿ ಬೆಳಗಿಸಿ ಧರ್ಮ ಸಮಾರಂಭ ಉದ್ಘಾಟಿಸಿದರು. ಈ ಪವಿತ್ರ ಸಮಾರಂಭದಲ್ಲಿ ಶ್ರೀನಿವಾಸ ಸರಡಗಿಯ ರೇವಣಸಿದ್ಧೇಶ್ವರ ಶಿವಾಚಾರ್ಯರು, ಸ್ಟೇಷನ್ ಬಬಲಾದ ಶಿವಮೂರ್ತಿ ಶಿವಾಚಾರ್ಯರು, ಸಿದ್ಧರಬೆಟ್ಟದ ವೀರಭದ್ರ ಶಿವಾಚಾರ್ಯರು, ಚಳಗೇರಿ ವೀರಸಂಗಮೇಶ್ವರ ಶಿವಾಚಾರ್ಯರು, ಹಲಬುರ್ಗಾ ಹಾವಗಿ ಲಿಂಗೇಶ್ವರ ಶಿವಾಚಾರ್ಯರು, ಮಾದನ ಹಿಪ್ಪರಗಿ ಶಾಂತವೀರ ಶಿವಾಚಾರ್ಯರು, ಆಲಮೇಲ ಚಂದ್ರಶೇಖರ ಶಿವಾಚಾರ್ಯರು, ಮಳಲಿಮಠದ ಡಾ. ಗುರುನಾಗಭೂಷಣ ಶಿವಾಚಾರ್ಯರು, ಕನ್ನೂರು-ಸಿಂಧನೂರು ಸೋಮನಾಥ ಶಿವಾಚಾರ್ಯರು, ಸಂಗೊಳ್ಳಿ ಗುರುಲಿಂಗ ಶಿವಾಚಾರ್ಯರು, ಹಳ್ಳಿಖೇಡ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ರಾಜೇಶ್ವರ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸದಲಗಾ ಸಿದ್ಧಲಿಂಗ ಶಿವಾಚಾರ್ಯರು, ಹಿರೇನಾಗಾಂವ ಗುರುಶಾಂತೇಶ್ವರ ಸ್ವಾಮೀಜಿ ಹುಡುಗಿ ವಿರಕ್ತಮಠದ ಶ್ರೀಗಳು ಸೇರಿದಂತೆ ವಿವಿಧ 25ಕ್ಕೂ ಹೆಚ್ಚು ಮಠಾಧೀಶರು ಪಾಲ್ಗೊಂಡು ಜಗದ್ಗುರುಗಳಿಗೆ ಗೌರವ ಸಲ್ಲಿಸಿದರು. ಈ ಅಪೂರ್ವ ಸಮಾರಂಭದಲ್ಲಿ ಗೊರಟಾ ರೇವಣಸಿದ್ದಯ್ಯ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಶ್ರೀ ರಂಭಾಪುರಿ ಜಗದ್ಗುರುಗಳವರ 35ನೇ ವರ್ಷದ ಪೀಠಾರೋಹಣ ವರ್ಧಂತಿ ಅಂಗವಾಗಿ 35 ದೀಪಗಳನ್ನು ಪ್ರಜ್ವಲಿಸಲಾಯಿತು.

ಪ್ರಶಸ್ತಿ ಪ್ರದಾನ: ಬೀದರಿನ ಬಿ.ಎಸ್.ಕುದುರೆ ಇವರಿಗೆ ಸಹಕಾರಿ ರತ್ನ ಪ್ರಶಸ್ತಿ, ಗಣಪತರಾವ್ ಖೂಬಾ ಇವರಿಗೆ ಸಾಧನಾ ಸಹ್ಯಾದ್ರಿ ಪ್ರಶಸ್ತಿ, ಶಿವಶರಣಪ್ಪ ವಾಲಿ ಇವರಿಗೆ ಸುದ್ದಿ ಸುಧಾಕರ ಪ್ರಶಸ್ತಿ, ಜಮೀರಾಬಾದನ ಅಲ್ಲಾಡಿ ವೀರೇಶಂ ಇವರಿಗೆ ದಾನ ವಿಶಾರದ ಪ್ರಶಸ್ತಿ, ಕಲಬುರ್ಗಿ ಶಿವಶರಣಪ್ಪ ಸಿರಿ ಇವರಿಗೆ ಗುರುಭಕ್ತಿ ಶಿರೋಮಣಿ ಪ್ರಶಸ್ತಿ ಪ್ರದಾನ ಮಾಡಿ ಶ್ರೀ ರಂಭಾಪುರಿ ಜಗದ್ಗುರುಗಳು ಆಶೀರ್ವದಿಸಿದರು. ಬಸವಕಲ್ಯಾಣದ ರಾಜಶ್ರೀ ದಿಲೀಪಸ್ವಾಮಿ ಭಕ್ತಿ ಗೀತೆ ಹಾಡಿದರು. ತ್ರಿಪುರಾಂತಕ ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸ್ವಾಗತಿಸಿದರು. ಮೆಹಕರ ಸಿದ್ಧವೀರಸ್ವಾಮಿ ರೇವಣಸಿದ್ಧಯ್ಯ ಹಿರೇಮಠ ಹಾಗೂ ಬಸವಕಲ್ಯಾಣದ ರಮೇಶ ರಾಜೋಳೆ ನಿರೂಪಿಸಿದರು.

ಶ್ರೀ ರಂಭಾಪುರಿ ಜಗದ್ಗುರುಗಳವರ ಪೀಠಾರೋಹಣದ ವರ್ಧಂತಿ ನಿಮಿತ್ಯ ಮಂಗಲ ಸ್ನಾನ ಪೂರೈಸಿ ಇಷ್ಟಲಿಂಗ ಮಹಾಪೂಜಾ ನೆರವೇರಿಸಿದರು. ನಂತರ ಗ್ರಾಮದ ಹನುಮಾನ್ ದೇವಸ್ಥಾನದಿಂದ ಮೇಹಕರ ಹಿರೇಮಠದ ವರೆಗೆ ಶ್ರೀ ರಂಭಾಪುರಿ ಜಗದ್ಗುರುಗಳವರ ಬೆಳ್ಳಿ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು. ಕುಂಭ ಹೊತ್ತ ಮಹಿಳೆಯರು ಆರತಿ ಹಿಡಿದ ಸುಮಂಗಲೆಯರು, ಮಹಿಳಾ ಭಜನಾ ಮಂಡಳಿ ಇನ್ನಿತರ ಕಲಾ ತಂಡಗಳು ಪಾಲ್ಗೊಂಡು ಉತ್ಸವಕ್ಕೆ ಮೆರಗು ತಂದರು.



ಯೋಗದಿಂದ ಒತ್ತಡ ನಿರ್ವಹಣೆ: ಪ್ರೊ.ತಿಪ್ಪೇರುದ್ರಪ್ಪ

ಬಳ್ಳಾರಿ,ಜ.23-

ಯೋಗವು ಮನಸ್ಸು, ದೇಹ ಮತ್ತು ಆತ್ಮವನ್ನು ಸಂಯೋಜಿಸುವ ಮೂಲಕ ಒತ್ತಡದ ಜೀವನವನ್ನು ನಿರ್ವಹಿಸಲು ಹಾಗೂ ಆರೋಗ್ಯ ಸುಧಾರಣೆಗೆ ಸಹಕಾರಿಯಾಗಿದೆ ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ತಿಪ್ಪೇರುದ್ರಪ್ಪ ಅವರು ಹೇಳಿದರು.

ವಿವಿಯ ಯೋಗ ಕೇಂದ್ರದಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ವಾರದಲ್ಲಿ ಮೂರು ದಿನಗಳ ಯೋಗ, ಪ್ರಾಣಾಯಾಮ ಮತ್ತು ಧ್ಯಾನ ತರಗತಿಗಳ ಕಾರ್ಯಕ್ರಮ ಪತಂಜಲಿ ಮಹರ್ಷಿಯವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಯೋಗವನ್ನು ನಮ್ಮಲ್ಲಿ ಅಳವಡಿಸಿಕೊಳ್ಳುವುದರಿಂದ ಗುರಿ ಸಾಧನೆಗೆ ಸಹಾಯವಾಗುತ್ತದೆ. ಆರೋಗ್ಯಕರ ಜೀವನಶೈಲಿಯನ್ನು ರೂಢಿಸುತ್ತದೆ.

ಯೋಗ ಕಾರ್ಯಕ್ರಮದಲ್ಲಿ ಎಲ್ಲ ಸಿಬ್ಬಂದಿ ಭಾಗವಹಿಸಿ ಎಂದರು.

ವಿವಿಯ ಯೋಗ ಅಧ್ಯಯನ ವಿಭಾಗದ ಉಪನ್ಯಾಸಕ ಡಿ.ಮಹೇಶ ಬಾಬು ಅವರು ಯೋಗದ ಮಹತ್ವದ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ವಾಣಿಜ್ಯ ಶಾಸ್ತ್ರ ವಿಭಾಗದ ಡೀನ್ ಪ್ರೊ. ಸದ್ಯೋಜಾತಪ್ಪ, ಶಿಕ್ಷಣ ನಿಕಾಯದ ಡೀನ್ ಪ್ರೊ.ಸಾಹೇಬ್‌ಅಲಿ ನಿರಗುಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಡಾ.ಶಶಿಧರ ಕೆಲ್ಲೂರ ಗಣ್ಯರನ್ನು ಸ್ವಾಗತಿಸಿ, ನಿರೂಪಿಸಿದರು. ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯೋಗಾಭ್ಯಾಸ ಮಾಡಿದರು.

ನೇರ ನುಡಿ ಮೂಲಕ ಸಾಮಾಜಿಕ ಅನಿಷ್ಟಗಳ ಬಗ್ಗೆ ನಿರಂತರ ಜಾಗೃತಿ ಮೂಡಿಸಿದವರು ನಿಜಶರಣ ಅಂಬಿಗರ ಚೌಡಯ್ಯ: ಕೆ.ಇ.ಚಿದಾನಂದಪ್ಪ

ಬಳ್ಳಾರಿ,ಜ.23-

ನೇರ, ನಿಷ್ಠುರ, ತೀಕ್ಷ್ಣ ಬರಹಗಳ ಮೂಲಕ ವರ್ಣವ್ಯವಸ್ಥೆ, ಲಿಂಗ ತಾರತಮ್ಯ, ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಅನಿಷ್ಟಗಳ ಬಗ್ಗೆ ನಿರಂತರ ಜಾಗೃತಿ ಮೂಡಿಸಿದವರು ನಿಜಶರಣ ಅಂಬಿಗರ ಚೌಡಯ್ಯನವರು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಅಂಬಿಗ ಎಂದರೆ ಭರವಸೆಯ ಬೆಳಕು ಎಂದು ಸಾರಿದ ಮಹಾನ್ ವಚನಕಾರ ಅಂಬಿಗರ ಚೌಡಯ್ಯ. 12 ನೇ ಶತಮಾನದ ಶಿವಶರಣರ ಸಾಲಿನಲ್ಲಿ ಇವರ ಸಹ ಸಮಾನರಾಗಿದ್ದರು. ಸಾಮಾಜಿಕ ಪರಿವರ್ತನೆಗಾಗಿ ಬಸವಣ್ಣನವರ ಹೆಗಲಿಗೆ ಹೆಗಲಾಗಿ ನಿಂತವರಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರು ಪ್ರಮುಖರು. ನಿರ್ಮಲ ಭಕ್ತಿ, ನಿಸ್ವಾರ್ಥ ಸೇವೆಯೇ ಭಗವಂತನನ್ನು ಒಲಿಸಿಕೊಳ್ಳುವ ಮಾರ್ಗಗಳು ಎಂದು ಬಿಂಬಿಸಿದವರು ಚೌಡಯ್ಯನವರು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಸರ್ವರಿಗೆ ಸಮಬಾಳು- ಸರ್ವರಿಗೆ ಸಮಪಾಲು ಎನ್ನುವ ದಿಸೆಯಂತೆ, 2014 ರಲ್ಲಿ ಶಿವಶರಣ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮ ಆಚರಣೆಗೆ



ನಿರ್ಧರಿಸಲಾಯಿತು ಎಂದು ತಿಳಿಸಿದರು.

ಸಂಗನಕಲ್ಲಿನ ನಿವೃತ್ತ ಶಿಕ್ಷಕ ಕೆ.ಬಿ. ಸಿದ್ದಲಿಂಗಪ್ಪ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಅಂಬಿಗರ ಚೌಡಯ್ಯ 12 ನೇ ಶತಮಾನದಲ್ಲಿ ಜೀವಿಸಿದ್ದ ಶಿವಶರಣ ಹಾಗೂ ವಚನಕಾರರು. ಉಳಿದೆಲ್ಲ ವಚನಕಾರರಿಗಿಂತ ಭಿನ್ನ ಹಾಗೂ ವಿಶಿಷ್ಟ ವ್ಯಕ್ತಿತ್ವ ಇವರದು. ವೃತ್ತಿಯಿಂದ ಅಂಬಿಗ, ಪ್ರವೃತ್ತಿಯಲ್ಲಿ ಅನುಭವಿಯಾಗಿದ್ದವರು. ಇವರು ನೇರ ನಿರ್ಭೀತ ನುಡಿಗಳಿಂದ ವಚನಗಳನ್ನು ಬರೆದಿರುವುದು ನಾವು ಕಾಣಬಹುದಾಗಿದೆ ಎಂದರು.

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಶಿವಪುರ (ಚೌಡದಾನಪುರ) ಗ್ರಾಮದಲ್ಲಿ ಜನಿಸಿದ ಚೌಡಯ್ಯನವರು ತಾಯಿ ಪಂಪಾದೇವಿ, ತಂದೆ ವಿರೂಪಾಕ್ಷನ ಮಗನಾಗಿದ್ದರು. ವಚನಕಾರ ಅಂಬಿಗರ ಚೌಡಯ್ಯ ಎಂಬ ಅಂಕಿತನಾಮದೊಂದಿಗೆ ಸುಮಾರು 279 ವಚನಗಳನ್ನು ಬರೆದರು. ಅವರ ಪದ್ಯಗಳು ಅವರ ಆಳವಾದ ಅನುಭವಗಳು ಮತ್ತು ಸಾಮಾಜಿಕ ಪ್ರಜ್ಞೆಯ ಪ್ರತಿಬಿಂಬವಾಗಿವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕೆ.ಆರ್.ಎರೇಗೌಡ ತಂಡ ವಚನ ಸಂಗೀತ ಪ್ರಸ್ತುತಪಡಿಸಿದರು.

ಗಮನಸೆಳೆದ ಮೆರವಣಿಗೆ: ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಜಯಂತಿ ಅಂಗವಾಗಿ ನಗರದಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು. ವಿವಿಧ ಸಾಂಸ್ಕೃತಿಕ ಕಲಾತಂಡಗಳು ಬಹಗವಹಿಸಿ ಮೆರಗು ನೀಡಿದವು. ಮೆರವಣಿಗೆಯಲ್ಲಿ ಕಳಸ-ಕುಂಭ ಹೊತ್ತ ನೂರಾರು ಮಹಿಳೆಯರು ಗಮನಸೆಳೆದರು. ಮೆರವಣಿಗೆಯು ಡಾ.ರಾಜ್ ಕುಮಾರ್ ರಸ್ತೆಯ ಮುನ್ಸಿಪಲ್ ಕಾಲೇಜು ಮೈದಾನದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ- ರೈಲ್ವೇ ನಿಲ್ದಾಣ ರಸ್ತೆ- ಹಳೆ ಜಿಲ್ಲಾಧಿಕಾರಿಗಳ ಕಚೇರಿ ರಸ್ತೆ- ಹೆಚ್.ಆರ್.ಗವಿಯಪ್ಪ ವೃತ್ತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದವರೆಗೆ ನಡೆಯಿತು.

ಕಾರ್ಯಕ್ರಮದಲ್ಲಿ ಬಳ್ಳಾರಿ ಜಿಲ್ಲಾ ಗಂಗಾಮತಸ್ಥರ ಸಂಘದ ಅಧ್ಯಕ್ಷ ಬಿ.ಮೌಲಾಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ನಿವೃತ್ತ ಆರ್ ಟಿಒ ಅಧಿಕಾರಿ ಪಂಪಾಪತಿ, ನಿವೃತ್ತ ಚಿತ್ರಕಲಾ ಶಿಕ್ಷಕ ರಮೇಶ್.ಯು., ನಿವೃತ್ತ ಕೆಕೆಆರ್ ಟಿಸಿ ಅಧಿಕಾರಿ ಹನುಮಂತಪ್ಪ, ಸಮಾಜದ ಮುಖಂಡರಾದ ಗಣೇಶ್ ಬಾರಿಕಾರ, ರಂಗಸ್ವಾಮಿ, ಹುಲುಗಪ್ಪ, ಮೋಹನ್, ದ್ರಾಕ್ಷಾಯಿಣಿ ಸೇರಿದಂತೆ ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಸಗರ ಶ್ರೀ ಯಲ್ಲಮ್ಮ ಜಾತ್ರೆ, ತಿಂಥಣಿ ಶ್ರೀ ಮೌನೇಶ್ವರ ಜಾತ್ರೆ, ಹೆಚ್ಚುವರಿ ಬಸ್‌ಗೆ ಸೂಚನೆ

ಯಾದಗಿರಿ,ಜ.23-

ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಸಗರ ಶ್ರೀ ಯಲ್ಲಮ್ಮ ದೇವರ ಜಾತ್ರೆ, ಸುರಪೂರ ತಾಲ್ಲೂಕಿನ ತಿಂಥಣಿ ಶ್ರೀ ಮೌನೇಶ್ವರ ದೇವರ ಜಾತ್ರೆಗೆ ಯಾದಗಿರಿ ವಿಭಾಗದಿಂದ ವಿಶೇಷ ಹೆಚ್ಚುವರಿ ಬಸ್‌ಗಳ ಕಾರ್ಯಚರಣೆ ವ್ಯವಸ್ಥೆ ಕಲ್ಪಿಸಿದೆ ಎಂದು ಯಾದಗಿರಿ ವಿಭಾಗ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗೀಯ ನಿಯಂತ್ರಣಾಧಿಕಾರಿ ಜಿ.ಬಿ. ಮಂಜುನಾಥ ಅವರು ತಿಳಿಸಿದ್ದಾರೆ. ಶಹಾಪೂರ ತಾಲ್ಲೂಕಿನ ಸಗರ ಶ್ರೀ ಯಲ್ಲಮ್ಮದೇವರ ಜಾತ್ರೆ 2026ರ ಜನವರಿ 27 ರಿಂದ 28ರ ವರೆಗೆ ನಡೆಯಲಿದೆ. ಸುರಪುರ ತಾಲ್ಲೂಕಿನ ತಿಂಥಣಿ ಶ್ರೀ ಮೌನೇಶ್ವರ ದೇವರ ಜಾತ್ರೆ 2026ರ ಜನವರಿ 28 ರಿಂದ ಫೆಬ್ರವರಿ 3ರ ವರೆಗೆ ನಡೆಯಲಿದೆ. ಈ ಜಾತ್ರೆಗೆ ಬರುವ ಭಕ್ತಾಧಿ ಪ್ರಯಾಣಿಕರ ಸಾರಿಗೆ ಅನುಕೂಲಕ್ಕಾಗಿ ಯಾದಗಿರ ವಿಭಾಗದಿಂದ ವಿಶೇಷ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಈ ವಿಶೇಷ ಬಸ್‌ಗಳು ಯಾದಗಿರ, ಶಹಾಪೂರ, ಸುರಪೂರ, ತಾಳಿಕೋಟ, ಹುಣಸಗಿ, ಕೆಂಭಾವಿ, ಸಿಂದಗಿ, ಕಲಬುರಗಿ, ನಾರಾಯಣಪೂರ, ವಿಜಯಪೂರ, ಹುಬ್ಬಳ್ಳಿ, ಗದಗ, ಬೆಂಗಳೂರು ಮುಂತಾದ ಸ್ಥಳಗಳಿಗೆ ಕಾರ್ಯಚರಣೆ ಮಾಡಲಾಗುತ್ತದೆ ಸಾರ್ವಜನಿಕ ಪ್ರಯಾಣಿಕರು ಈ ವಿಶೇಷ ಬಸ್‌ಗಳ ಸದುಪಯೋಗ ಪಡೆದುಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಸುರಪೂರ ಘಟಕ ವ್ಯವಸ್ಥಾಪಕರು ಮೊ.ನಂ. 7760992467, ಶಹಾಪೂರ ಘಟಕ ವ್ಯವಸ್ಥಾಪಕರು 7760992464, ಯಾದಗಿರ ಘಟಕ ವ್ಯವಸ್ಥಾಪಕರು 7760992463, ಸುರಪೂರ ಬಸ್ ನಿಲ್ದಾಣಾಧಿಕಾರಿ 9008390308, ಶಹಾಪೂರ ಬಸ್ ನಿಲ್ದಾಣಾಧಿಕಾರಿ 7760992458, ಯಾದಗಿರಿ ಬಸ್ ನಿಲ್ದಾಣಾಧಿಕಾರಿ 9071096786ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇಯ ಪುಟದಿಂದ

ಸಾಲು ಸಾಲು ರಜೆ: ಖಾಸಗಿ ಬಸ್ ಟಿಕೆಟ್ ದರ ದುಪ್ಪಟ್ಟು;ಹೆಚ್ಚುವರಿ ಬಸ್

ರಾಜ್ಯಾದಾದ್ಯಂತ ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಜೊತೆ ಸೇರಿ ಹೆಚ್ಚುವರಿ ಬಸ್‌ಗಳನ್ನು ಓಡಿಸಲಾಗುತ್ತಿದೆ. ಖಾಸಗಿ ಬಸ್ ದರ ಏರಿಕೆಯಿಂದ ತೊಂದರೆಗೆ ಒಳಗಾದ ಪ್ರಯಾಣಿಕರಿಗೆ ಕೈಗೆಟುಕುವ ಆಯ್ಕೆ ನೀಡುವ ಗುರಿಯನ್ನು ಹೊಂದಿದ್ದೇವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ರಾತ್ರಿಯೇ ವಿವಿಧ ಜಿಲ್ಲೆಗಳಿಗೆ 265 ಬಿಎಂಟಿಸಿ ಬಸ್‌ಗಳು ಸಂಚರಿಸುತ್ತಿವೆ. ಶನಿವಾರ, ಬೇಡಿಕೆಯ ಆಧಾರದ ಮೇಲೆ 500 ಕ್ಕೂ ಹೆಚ್ಚು ಬಿಎಂಟಿಸಿ ಬಸ್‌ಗಳನ್ನು ಓಡಿಸುವ ನಿರೀಕ್ಷೆಯಿದೆ. ಕೆಎಸ್‌ಆರ್‌ಟಿಸಿ ಸೇವೆಗಳಿಗೆ ಆದ್ಯತೆ ನೀಡಲಾಗಿದ್ದು, ಅಗತ್ಯ ಇರುವ ಕಡೆ ಬಿಎಂಟಿಸಿ ಬಸ್ ಸೇವೆ ನೀಡುತ್ತಿದ್ದೇವೆ. ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಪ್ರತಿ ಮಾರ್ಗದಲ್ಲಿ ಬಸ್‌ಗಳು ಇರಲಿವೆ. ಜೊತೆಗೆ ಜನದಟ್ಟಣೆ ಮಾರ್ಗ ಮತ್ತು ಪ್ರಯಾಣಿಕರು ಹೆಚ್ಚು ದರ ಪಾವತಿಸದಂತೆ ಹೆಚ್ಚುವರಿ ಬಿಎಂಟಿಸಿ ಬಸ್ ಓಡಿಸಲಾಗುವುದು ಎಂದು ಸಾರಿಗೆ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಖಾಸಗಿ ಬಸ್ ದರ ಏರಿಕೆಗೆ ಪ್ರಯಾಣಿಕರ ಆಕ್ರೋಶ: ಅಧಿಕಾರಿಗಳು ಪದೇ ಪದೆ ಎಚ್ಚರಿಕೆ ನೀಡಿದರೂ ಖಾಸಗಿ ಬಸ್ ದರ ಏರಿಕೆ ಏಕೆ ಮುಂದುವರಿಯುತ್ತಿದೆ ಎಂದು ಅನೇಕ ಪ್ರಯಾಣಿಕರು ಪ್ರಶ್ನಿಸಿದ್ದಾರೆ.

ಪ್ರತಿ ಹಬ್ಬ ಮತ್ತು ರಜಾ ದಿನಗಳಲ್ಲಿ ಈ ಸಮಸ್ಯೆ ಎದುರಾಗುತ್ತದೆ. ಟಿಕೆಟ್ ಬೆಲೆ ನಿಯಂತ್ರಿಸಲು ಸ್ಪಷ್ಟ ವ್ಯವಸ್ಥೆ ಇರಬೇಕು ಎಂದು ಉಡುಪಿಗೆ ಪ್ರಯಾಣಿಸುತ್ತಿರುವ ಪವನ್ ಆಗ್ರಹಿಸಿದ್ದಾರೆ.

ಬೆಂಗಳೂರಲ್ಲಿರುವ ಕುಟುಂಬಗಳಿಗೆ ಈ ದರ ಹೊರೆಯಾಗುತ್ತದೆ. ರಜಾದಿನಗಳು ವಿಶ್ರಾಂತಿಗಾಗಿ ಹೊರತು ಆರ್ಥಿಕ ಒತ್ತಡಕ್ಕಾಗಿ ಅಲ್ಲ ಎಂದು ಕೊಡಗಿಗೆ ತೆರಳುತ್ತಿರುವ ಜಯಸಿಂಹ ಅಸಮಾಧಾನ ಹೊರಹಾಕಿದ್ದಾರೆ. ಪ್ರಯಾಣಿಕರ ಅವಶ್ಯಕತೆಯನ್ನು ಖಾಸಗಿ ಬಸ್ ಮಾಲೀಕರು ಹೀಗೆ ಬಳಸಿಕೊಳ್ಳುತ್ತಾರೆ. ಸಾರಿಗೆ ಇಲಾಖೆ ಮಧ್ಯಪ್ರವೇಶಿಸಿ ದರ ಏರಿಕೆ ಮಿತಿ ನಿಗದಿಪಡಿಸಬೇಕು ಎಂದು ಮಂಗಳೂರಿನ ಮಧುಭೂಷಣ್ ಒತ್ತಾಯಿಸಿದ್ದಾರೆ.

ಗಿಣಿಗೇರಾರಾಯಚೂರು ರೈಲು ಮಾರ್ಗವನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಿ: ಸಂಸದ ಜಿ ಕುಮಾರ ನಾಯಕ

ರೈಲ್ವೇ ಬೈಪಾಸ್ ನಿರ್ಮಿಸುವ ಬಗ್ಗೆ ವಿಸ್ತಾರವಾಗಿ ಚರ್ಚಿಸಿದರು

ಈ ವೇಳೆಯಲ್ಲಿ ಮುಕುಲ್ ಸರನ್ ಮಾಥುರ್ ಅವರು ಉತ್ತಮ ಪ್ರತಿಕ್ರಿಯೆ ನೀಡಿ, ಗಿಣಿಗೇರಾ ರಾಯ ಚೂರು ರೈಲು ಮಾರ್ಗದ ಕಾರ್ಯ ಗತ ಗೊಳಿಸುವಿಕೆಗೆ ಶೀಘ್ರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿ ದ್ದರು. ಜೊತೆಗೆ ಕುರ್ಡಿ ಮತ್ತು ಮಮದಾಪುರ ಕುರಿತ ಪ್ರಸ್ತಾವನೆ ಗಳನ್ನು ತಮ್ಮ ತಂಡದೊಂದಿಗೆ ಪರಿಶೀಲಿಸಿ, ಶೀಘ್ರದಲ್ಲೇ ಮಾಹಿತಿ ನೀಡುವುದಾಗಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸತ್ಯ ಪ್ರಕಾಶ್ ಶಾಸ್ತ್ರಿ ರವರು (ಪ್ರಿನ್ಸಿಪಲ್ ಚೀಫ್ ಕಮರ್ಶಿಯಲ್ ಮ್ಯಾನೇಜರ್), ಶ್ರೀ ಬಿ. ಪ್ರಶಾಂತ್ ಕುಮಾರ್ ರವರು (ಪ್ರಿನ್ಸಿಪಲ್ ಚೀಫ್ ಆಪರೇಟಿಂಗ್ ಮ್ಯಾನೇಜರ್) ಹಾಗೂ ಶ್ರೀ ವೆಂಕಟೇಶ್ವರ ರಾವ್ ರವರು (ಚೀಫ್ ಎಂಜಿನಿಯರ್ ಕನ್‌ಸ್ಟಕ್ಷನ್) ಕೂಡ ಉಪಸ್ಥಿತರಿದ್ದರು..

ಜಿಲ್ಲಾ ಯೋಜನಾ ಸಮಿತಿಯ ಚುನಾವಣೆ, ಫಲಿತಾಂಶ ಪ್ರಕಟ. ವೈ.ಭೂಪನಗೌಡ ಆಯ್ಕೆ

ರಾಯಚೂರು ನೋಟಿಸ್ ಬೋರ್ಡ್‌ನಲ್ಲಿ ಸಾರ್ವ ಜ ನಿಕರ ಮಾಹಿತಿಗಾಗಿ ಪ್ರಕಟಿಸ ಲಾಗಿದೆ ಎಂದು ಜಿಲ್ಲಾ ಯೋಜನಾ ಸಮಿತಿ ಚುನಾವಣೆಯ ಚುನಾವಣಾಧಿ ಕಾರಿಗಳು ಆಗಿರುವ ಜಿ. ಪಂ.ಮುಖ್ಯ ಕಾರ್ಯನಿರ್ವಾ ಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಲ್ಪಸಂಖ್ಯಾತರ ಕನಸಿಗೆ ಸಾಲವೇ ಕೀಲಿಕೈ, ಈಗ ಬೇಕಿದೆ ನೆರವಿನ ಹಸ್ತ: ಸಂಸದ ಜಿ ಕುಮಾರ ನಾಯಕ

ಪ್ರದೇಶದಂತಹ ದೊಡ್ಡ ರಾಜ್ಯಗಳಲ್ಲಿಯೂ ಓಎಆಈಅ ಯೋಜನೆಗಳಲ್ಲಿ ಲಾಭ ಪಡೆದವರು 30 ಸಾವಿರಕ್ಕೂ ಕಡಿಮೆ. ಶಿಕ್ಷಣ ಸಾಲಗಳ ವಿಷಯದಲ್ಲೂ ಇದೇ ಸ್ಥಿತಿ ಇದೆ. 2019-20 ರಿಂದ 2021-22ರ ನಡುವೆ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಕೇವಲ 513 ಸಾಲಗಳು ಮಂಜೂರಾಗಿವೆ. ಇದಕ್ಕೆ ಹೋಲಿಸಿದರೆ ಈಗ ನಿಲ್ಲಿಸಿರುವ ''ಪಢೋ ಪರ್ದೇಶ್'' ಯೋಜನೆ ಪ್ರತಿವರ್ಷ 3,500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿತ್ತು. ಇನ್ನೊಂದು ಆತಂಕಕಾರಿ ಸಂಗತಿ ಏನೆಂದರೆ, ಓಎಆಈಅಗೆ ಕೇಂದ್ರ ಸರ್ಕಾರ ನೀಡುತ್ತಿದ್ದ ಹಣದ ನೆರವು ಕಡಿಮೆಯಾಗಿದೆ. 2019-20ರಲ್ಲಿ?160 ಕೋಟಿ ನೀಡಿದ್ದ ಕೇಂದ್ರ ಸರ್ಕಾರ, 2023-24ರಲ್ಲಿ ಅದನ್ನು ?61 ಕೋಟಿಗೆ ಇಳಿಸಿದೆ. ಇದು ಅಲ್ಪಸಂಖ್ಯಾತರ ಕಲ್ಯಾಣದ ವಿಷಯದಲ್ಲಿ ಕೇಂದ್ರದ ಆಸಕ್ತಿ ಕಡಿಮೆಯಾಗಿದೆ ಎಂಬ ಸೂಚನೆ. ಇಂದು ಬಹುಮಂದಿ ಅಲ್ಪಸಂಖ್ಯಾತ ಕುಟುಂಬಗಳು ಬ್ಯಾಂಕ್ ಸಾಲದಿಂದ ದೂರವೇ ಉಳಿದಿವೆ. ಅವರು ಹೆಚ್ಚಾಗಿ ಅಧಿಕ ಬಡ್ಡಿಯ ಖಾಸಗಿ ಸಾಲಕೊಡುವವರ ಬಳಿ ಹೋಗುವ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಇದನ್ನು ಬದಲಾಯಿಸಲು ಮೊದಲು ಸಾಲ ನೀಡುವ ವ್ಯವಸ್ಥೆಯ ವ್ಯಾಪ್ತಿ ಹೆಚ್ಚಬೇಕಿದೆ. ಖಇಥಂ ಮುಂತಾದ ಸಮುದಾಯ ಆಧಾರಿತ ಸಂಸ್ಥೆಗಳು ಜನರ ನಂಬಿಕೆಯ ಮೇಲೆ ಸಾಲ ನೀಡಿ ಉತ್ತಮ ಕೆಲಸ ಮಾಡಿವೆ. ಇಂತಹ ಸಂಸ್ಥೆಗಳ ಅನುಭವವನ್ನು ಸರ್ಕಾರ ಬಳಸಿಕೊಳ್ಳಬೇಕು. ಇಷ್ಟೇ ಅಲ್ಲ, ಸಾಲ ಕೊಡಿಸಿದ ನಂತರವೂ ಸಾಲ ಪಡೆದವರಿಗೆ ಮಾರ್ಗದರ್ಶನ ಬೇಕಾಗುತ್ತದೆ. ಸಣ್ಣ ಉದ್ಯಮ ನಡೆಸುವ ತರಬೇತಿ, ಹಣದ ಸರಿಯಾದ ಬಳಕೆ, ಮರುಪಾವತಿ ಮೇಲ್ವಿಚಾರಣೆ ಇವೆಲ್ಲವೂ ಇದ್ದರೆ ಸಾಲದ ಪ್ರಯೋಜನ ಚೆನ್ನಾಗಿ ತಲುಪುತ್ತದೆ. ಆಗ ಸಾಲ ಒಂದು ಹಣದ ವ್ಯವಹಾರ ಮಾತ್ರ ಅಲ್ಲದೆ, ಜನರನ್ನು ಸ್ವಾವಲಂಬಿಗಳನ್ನಾಗಿಸುವ ಶಕ್ತಿಯಾಗಿ ಪರಿವರ್ತನೆ ಆಗುತ್ತದೆ. 1938ರ ಹರಿ?ಪುರ ಕಾಂಗ್ರೆಸ್ ಅಧಿವೇಶನದಲ್ಲಿ ಜವಾಹರ್‌ಲಾಲ್ ನೆಹರೂ ಅವರು ಹೇಳಿದಂತೆ, ಬಡತನ ಎಲ್ಲರನ್ನೂ ಒಂದೇ ರೀತಿ ಕಾಡುತ್ತದೆ. ದೇಶ ಮುನ್ನಡೆಯಬೇಕಾದರೆ ಎಲ್ಲ ಸಮುದಾಯಗಳಿಗೂ ''ನಾವು ಈ ದೇಶದ ಸಮಾನ ಭಾಗ'' ಎಂಬ ಭಾವನೆ ಬರಬೇಕು. ಇಂದು ಅಲ್ಪಸಂಖ್ಯಾತರಿಗೆ ಸಾಲದ ಹರಿವು ಕಡಿಮೆಯಾಗಿ, ಸರ್ಕಾರದ ಸಹಾಯವೂ ಇಳಿಯುತ್ತಿರುವ ಸ್ಥಿತಿಯಲ್ಲಿ ನೆಹರೂ ಅವರ ಆ ಮಾತು ಇನ್ನಷ್ಟು ಅರ್ಥಪೂರ್ಣವಾಗುತ್ತದೆ.

ಅಲ್ಪಸಂಖ್ಯಾತ ಸಮುದಾಯದ ಜನರಿಗೆ ಸರಿಯಾದ ಸಾಲ ವ್ಯವಸ್ಥೆ, ಬೆಂಬಲ ಹಾಗೂ ಅವಕಾಶ ಕೊಟ್ಟರೆ ಅವರು ಶಿಕ್ಷಣ, ಉದ್ಯಮ, ಉದ್ಯೋಗದ ಮೂಲಕ ದೇಶದ ಬೆಳವಣಿಗೆಯಲ್ಲಿ ಸಮಾನ ಪಾಲುದಾರರಾಗಬಹುದು. ಇದಕ್ಕಾಗಿ ಮಾತು ಮಾತ್ರವಲ್ಲ, ಮಹತ್ವದ ಕ್ರಮ ಬೇಕಾಗಿದೆ.

ಹೊಸ ವಂದೇ ಭಾರತ ಸ್ಲೀಪರ್ ಕೋಚ್ ರೈಲುಗಳನ್ನು ಓಡಿಸುವಂತೆ ರೈಲ್ವೆ ಸಚಿವರಿಗೆ ಡಾ.ಬಾಬುರಾವ್ ಆಗ್ರಹ

ಉತ್ತಮ ಸ್ಪಂದನೆ ಇದ್ದು, ಕಲ್ಯಾಣ ಕರ್ನಾಟಕ ಬಹುತೇಕ ಜಿಲ್ಲೆಯ ಜನರು ತಿರುಪತಿಯಂತಹ ದೇವಸ್ಥಾನಕ್ಕೂ ತೆರಳುವುದಕ್ಕೆ ಹೆಚ್ಚಿನ ಅನುಕೂಲವಾಗುವುದಲ್ಲದೆ ರೈಲ್ವೆ ಇಲಾಖೆಯೂ ಉತ್ತಮ ಆದಾಯವನ್ನು ನಿರೀಕ್ಷಿಸಬಹುದಾಗಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಸ್ ಹರಿದು 4ವರ್ಷದ ಕಂದಮ್ಮ ಸಾವು

ಗುರುತಿಸಲಾಗಿದೆ. ಗೂಗಲ್ ನಿಂದ ದೇವದುರ್ಗ ತೆರಳುತ್ತಿದ್ದ ವೇಳೆ ಮದರಕಲ್ ಗ್ರಾಮದ ಬಳಿ ಸಾರಿಗೆ ಬಸ್ಸಿ ನ ಚಕ್ರದಡಿಗೆ ಸಿಲುಕಿ ಮಗು ಮೃತಪಟ್ಟಿದೆ ಎಂದು ತಿಳಿದು ಬಂದಿದೆ. ಘಟನೆ ಸಂಬಂಧ ಗಬ್ಬೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಿಣಿಗೇರಾ-ರಾಯಚೂರು ರೈಲು ಮಾರ್ಗದ ಕುರಿತು: ಸಭೆ- ಚರ್ಚೆ-ಭರವಸೆ

ಗಿಣಿಗೇರಾ-ರಾಯಚೂರು ರೈಲು ಮಾರ್ಗವನ್ನು ಶೀಘ್ರಗತಿಯಲಿ ಪೂರ್ಣಗೊಳಿಸಿ:ಕುಮಾರ ನಾಯಕ



ರಾಯಚೂರು,ಜ.22

ಇಂದು ಹುಬ್ಬಳ್ಳಿಯಲ್ಲಿ ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಮುಕುಲ್ ಸರನ್ ಮಾಥುರ್ () ಅವರನ್ನು ಭೇಟಿ ಮಾಡಿದ ರಾಯಚೂರು ಯಾದಗಿರಿ ಲೋಕಸಭಾ ಕ್ಷೇತ್ರದ ಸಂಸದ ಶ್ರೀ ಜಿ ಕುಮಾರ ನಾಯಕರವರು ಗಿಣಿಗೇರಾ ರಾಯಚೂರು ರೈಲು ಮಾರ್ಗವನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸುವ ಕುರಿತು ವಿವರವಾಗಿ ಚರ್ಚೆ ನಡೆಸಿದರು.

ಮಾನ್ವಿ ತಾಲೂಕಿನ ಕುರ್ಡಿಯನ್ನು ಕ್ರಾಸಿಂಗ್ ಸ್ಟೇಷನ್ ಆಗಿ ಅಭಿವೃದ್ಧಿಪಡಿಸುವ ಕುರಿತು ಹಾಗೂ ರಾಯಚೂರು ತಾಲೂಕಿನ ಮಮದಾಪುರವನ್ನು ಗ್ರೇಟರ್ ರಾಯಚೂರು ಸ್ಟೇಷನ್ ಆಗಿ ರೂಪಿಸಿ ಗೂಡ್ಸ್ ಸೈಡಿಂಗ್ ಮತ್ತು -ಜಂಕ್ಷನ್ ಮೂಲಕ ರಾಯಚೂರು ರೈಲ್ವೇ ಬೈಪಾಸ್ ನಿರ್ಮಿಸುವ ಬಗ್ಗೆ ವಿಸ್ತಾರವಾಗಿ ಚರ್ಚಿಸಿದರು.

ಈ ವೇಳೆಯಲ್ಲಿ ಶ್ರೀ ಮುಕುಲ್ ಸರನ್ ಮಾಥುರ್ ಅವರು ಉತ್ತಮ ಪ್ರತಿಕ್ರಿಯೆ ನೀಡಿ, ಗಿಣಿಗೇರಾ ರಾಯಚೂರು ರೈಲು ಮಾರ್ಗದ ಕಾರ್ಯಗತಗೊಳಿಸುವಿಕೆಗೆ ಶೀಘ್ರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು. ಜೊತೆಗೆ ಕುರ್ಡಿ ಮತ್ತು ಮಮದಾಪುರ ಕುರಿತ ಪ್ರಸ್ತಾವನೆಗಳನ್ನು ತಮ್ಮ ತಂಡದೊಂದಿಗೆ ಪರಿಶೀಲಿಸಿ, ಶೀಘ್ರದಲ್ಲೇ ಮಾಹಿತಿ ನೀಡುವುದಾಗಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಶ್ರೀ ಸತ್ಯ ಪ್ರಕಾಶ್ ಶಾಸ್ತ್ರಿ ರವರು (ಪ್ರಿನ್ಸಿ ಪಲ್ ಚೀಫ್ ಕಮರ್ಶಿಯಲ್ ಮ್ಯಾನೇಜ)ರ್, ಶ್ರೀ ಬಿ. ಪ್ರಶಾಂತ್ ಕುಮಾರ್ ರವರು (ಪ್ರಿನ್ಸಿ ಪಲ್ ಚೀಫ್ ಆಪರೇಟಿಂಗ್ ಮ್ಯಾನೇಜ)ರ್ ಹಾಗೂ ಶ್ರೀ ವೆಂಕಟೇಶ್ವರ ರಾವ್ ರವರು (ಚೀಫ್ ಎಂಜಿನಿಯರ್ ಕನ್‌ಸ್ಟ್ರಕ್ಷನ್) ಕೂಡ ಉಪಸ್ಥಿತರಿದ್ದರು..

ಪ್ರಸವಪೂರ್ವ ಭ್ರೂಣ ಲಿಂಗ ಪತ್ತೆ ನಿಷೇಧ ಕಾನೂನು ಪರಿಣಾಮಕಾರಿ ಅನುಷ್ಠಾನಗೊಳಿಸಿ :

ಭ್ರೂಣ ಲಿಂಗ ಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆ ತಡೆಗೆ ವಿಶೇಷ ಗಮನ ನೀಡಿ- ಜಿಲ್ಲಾಧಿಕಾರಿ ಹರ್ಷಲ್ ಭೋಯರ್

ಯಾದಗಿರಿ,ಜ.23-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಯಾದಗಿರಿ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು-ಮಿಷನ್ ಶಕ್ತಿ ಯೋಜನೆಯಡಿ ''ಬೇಟಿ ಬಚಾವೋ ಬೇಟಿ ಪಡಾವೊ'' ಒಂದು ದಿನದ ಕಾರ್ಯಾಗಾರವನ್ನು ಜಿಲ್ಲೆಯ ವಿವಿಧ ಸ್ಕ್ಯಾನಿಂಗ್ ಸೆಂಟರ್‌ಗಳ ವೈದ್ಯರು ಹಾಗೂ ಸ್ತ್ರೀರೋಗ ತಜ್ಞರಿಗೆ ನಗರದ ಆರೋಗ್ಯ ಇಲಾಖೆ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಗಾರವನ್ನು ಉದ್ಘಾಟಿಸಿದ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು, ಗರ್ಭಪೂರ್ವ ಹಾಗೂ ಪಸವಪೂರ್ವ ಭ್ರೂಣಲಿಂಗ ಪತ್ತೆ ತಂತ್ರ, ವಿಧಾನಗಳ ನಿಷೇಧ ಕಾಯ್ದೆ (PA PKBU &1994) ಕುರಿತು ಸ್ಕ್ಯಾನಿಂಗ್ ಸೆಂಟರ್‌ಗಳ ವೈದ್ಯರು ಮತ್ತು ಸ್ತ್ರೀ ರೋಗ ತಜ್ಞರಿಗೆ ಒಂದು ದಿನದ ತರಬೇತಿ ಇದಾಗಿದ್ದು, ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ಎಂಬ ಸಾಮಾಜಿಕ ಪಿಡುಗನ್ನು ನಿರ್ಮೂಲನೆ ಮಾಡಲು ಕಾನೂನಿನ ಮಾದರಿ ಹಾಗೂ ಶಾಸನ ಬದ್ಧ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಅತ್ಯಂತ ಅಗತ್ಯವಾಗಿರುತ್ತದೆ ಎಂದರು.

ಸಮಾಜದಲ್ಲಿ ಲಿಂಗಾನುಪಾತದ ಅಸಮತೋಲನವು ಗಂಭೀರ ಸಾಮಾಜಿಕ ಸಮಸ್ಯೆಯಾಗಿದ್ದು, ಇದರ ಮೂಲ ಕಾರಣಗಳಲ್ಲಿ ಪ್ರಮುಖವಾದದ್ದು ಭ್ರೂಣ ಲಿಂಗ ಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆಆಗಿದೆ. ಈ ಸಾಮಾಜಿಕ ಪಿಡುಗನ್ನು ತಡೆಯುವ ಉದ್ದೇಶದಿಂದ ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣ ಲಿಂಗ ಪತ್ತೆ, ತಂತ್ರ ವಿಧಾನಗಳ ನಿಷೇದ ಕಾಯ್ದೆ (PAPKB &1994)ಅನ್ನು ಜಾರಿಗೆ ತಂದಿದ್ದು 2003ರಲ್ಲಿ ಕಾಯ್ದೆಯನ್ನು ಇನ್ನಷ್ಟು ಬಲಪಡಿಸಲಾಗಿದೆ. ಹಾಗೂ ಭ್ರೂಣಲಿಂಗ ಪತ್ತೆಯನ್ನು ಸಂಪೂರ್ಣವಾಗಿ ನಿಷೇಧಿಸುವುದರ ಜೊತೆಗೆ ಹೆಣ್ಣು ಮಕ್ಕಳ ಜೊತೆಗೆ ಹೆಣ್ಣು ಮಕ್ಕಳ ಜನನವನ್ನು ಉತ್ತೇಜಿಸುವುದು, ಲಿಂಗಾನುಪಾತವನ್ನು ಸಮತೋಲನದಲ್ಲಿರಿಸುವುದು ಹಾಗೂ ಮಹಿಳೆಯರ ಗೌರವ ಮತ್ತು ಹಕ್ಕುಗಳನ್ನು ರಕ್ಷಿಸುವುದೇ ಈ ಕಾಯ್ದೆಯ ಉದ್ದೇಶವಾಗಿದೆ ಎಂದರು.

ವೈದ್ಯಕೀಯ ತಂತ್ರಜ್ಞಾನದ ದುರುಪಯೋಗದಿಂದ ಗರ್ಭವಸ್ಥೆಯಲ್ಲಿಯಲ್ಲೇ ಲಿಂಗ ಪತ್ತೆ, ಮಾಡಿಸಿ ಹೆಣ್ಣು ಭ್ರೂಣವನ್ನು ನಾಶಪಡಿಸುವ ಪ್ರವೃತ್ತಿ ಹೆಚ್ಚಾಗಿದ್ದು ಇದು



ಸಮಾಜದಲ್ಲಿ ಗಂಡು-ಹೆಣ್ಣು ಎಂಬ ಭೇದಭಾವವನ್ನು ಗಾಢಗೊಳಿಸಿ ಭವಿಷ್ಯದಲ್ಲಿ ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ, ಆದ್ದರಿಂದ ಲಿಂಗ ಪತ್ತೆ ಕೇವಲ ಕಾನೂನ ಅಪರಾಧವಲ್ಲ ಅದು ಮಾನವೀಯ ಅಪರಾಧವು ಹೌದು ಎಂಬ ಕುರಿತು ಸರ ಸಮಾಜದಲ್ಲಿ ಮಾನಸಿಕ ಬದಲಾವಣೆ ತರುವುದು ಅಗತ್ಯವಾಗಿರುತ್ತದೆ ಎಂದು ಹೇಳಿದರು.

PA PKBU ಕಾಯ್ದೆ 1994 ರ ಅನುಷ್ಠಾನದಲ್ಲಿ ವೈದ್ಯರು ಮತ್ತು ಸ್ಕ್ಯಾನಿಂಗ್ ಸೆಂಟರ್‌ಗಳ ಪಾತ್ರ ಅತ್ಯಂತ ಮಹಾತ್ವದ್ದಾಗಿರುತ್ತದೆ, ವೈದ್ಯರುಗಳು, ವೈದ್ಯರು ಕಾನೂನಿನ ಮಿತಿಯೊಳಗೆ ಕಾರ್ಯನಿರ್ವಹಿಸಿ ಸಾಮಾಜಿಕ ನೈತಿಕ ಮಾದರಿಯಾಗಿ ಕೆಲಸ ಮಾಡಬೇಕು, ವೈದ್ಯಕೀಯ ಸೇವೆ ವ್ಯಾಪಾರವಲ್ಲ ಅದು ಮಾನವ ಸೇವೆಯಾಗಿದೆ ಎಂಬ ಮನೋಭಾವವನ್ನು ಬೆಳಿಸಿಕೊಳ್ಳಬೇಕು ಎಂದು ಹೇಳಿದರು.

ಹೆಣ್ಣು ಗಂಡು ಎಂಬ ಭೇದಭಾವ ಕೇವಲ ಕಾನೂನಿಂದ ಮಾತ್ರ ಹೋಗುವುದಿಲ್ಲ, ಜನರ ಮನಸ್ಥಿತಿಯಲ್ಲಿ ಬದಲಾವಣೆ ತರುವುದು ಪ್ರಮುಖವಾಗಿರುತ್ತದೆ, ಹೆಣ್ಣು ಮಕ್ಕಳು ಕುಟುಂಬ ಮತ್ತು ಸಮಾಜದ ಭವಿಷ್ಯ ಎಂಬ ಭಾವನೆ ಬೆಳೆಸಿಕೊಳ್ಳಬೇಕು. ''ಹೆಣ್ಣು ಭಾರವಲ್ಲ-ಶಕ್ತಿಯ ಮೂಲ'' ಎಂಬ ಸಂದೇಶವನ್ನು ಸಮಾಜದ ಪ್ರತಿಯೊಬ್ಬರಿಗೂ ತಲುಪಿಸಲು ಸೂಚಿಸಿದರು. ಮತ್ತು ಮಿಷನ್ ಶಕ್ತಿ ಯೋಜನೆ, ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಗಳು ಹೆಣ್ಣು ಮಕ್ಕಳ ಸುರಕ್ಷತೆ, ಭದ್ರತೆ ಮತ್ತು ಸಬಲೀಕರಣ ದಿಕ್ಕಿನಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ, ವೈದ್ಯರು ಸಮಾಜಕ್ಕೆ ಮಾದರಿಯಾಗಿ ಕಾರ್ಯ ನಿರ್ವಹಿಸಬೇಕು. ಹೆಣ್ಣು-ಗಂಡು ಎಂಬ ಭೇದ-ಭಾವವನ್ನು ದೂರ ಮಾಡುವ ನಿಟ್ಟನಲ್ಲಿ ಜನರ ಮನಸ್ಥಿತಿಯನ್ನು ಬದಲಾವಣೆ ತರಬೇಕಾಗಿದೆ. ಭ್ರೂಣ ಹತ್ಯೆ ಎಂಬ ಗಂಭೀರ ಸಮಸ್ಯೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಕಾನೂನು, ಆಡಳಿತ ವೈದ್ಯಕೀಯ ವೃತ್ತಿಯವರು, ಮತ್ತು ಸಮಾಜ ಒಂದಾಗಿ ಕಾರ್ಯನಿರ್ವಹಿಸು ವುದರ ಜೊತೆಗೆ ವಿವಿಧ ಜಾಗೃತಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ವಿಶೇಷ ಅಗತ್ಯವಾಗಿರುತ್ತದೆ ಎಂದು ತಿಳಿಸಿದರು. ಜಿಲ್ಲಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಶ್ರೀ ಮಹೇಶ್ ಬಿರಾದಾರ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಪನಿರ್ದೇಶಕ ಶ್ರೀ ತಿಪ್ಪಣ್ಣ ಶಿರಸಗಿ, ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಾಗಾರದಲ್ಲಿ ಮಲ್ಲಪ್ಪ, ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಅಧಿಕಾರಿಗಳು, ಮತ್ತು ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿಗಳಾದ ಜ್ಯೋತಿ. ಡಿ.ಕೆ,ಭೀಮರಾಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಭೀಮರಾಯ,ಯಲ್ಲಪ್ಪ.ಕೆ, ಜಿಲ್ಲಾ ಮಿಷನ್ ಸಂಯೋಜಕರು, ಯಲ್ಲಪ್ಪ.ಕೆ ಜಿಲ್ಲಾ ಮಹಿಳಾ ಸಬಲೀಕರಣ ಘಟಕದ ಸಿಬ್ಬಂದಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ವೈದ್ಯರು ಹಾಗೂ ಸ್ತ್ರೀರೋಗ ತಜ್ಞರು ಭಾಗವಹಿಸಿದ್ದರು.

ಶಿಕ್ಷಣ ಇಲಾಖೆ ಅಧಿಕಾರಿಗಳೊಂದಿಗೆ ಶಾಸಕ ಪ್ರಭು ಚವ್ಹಾಣ ಸಭೆ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಸೂಚನೆ

ಔರಾದ್,ಜ.23-

ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಔರಾದ(ಬಿ) ಕ್ಷೇತ್ರದ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಿಸುವ ಉದ್ದೇಶದಿಂದ ಜ.20 ರಂದು ಘಮಸುಬಾಯಿ ತಾಂಡಾ ಬೋಂತಿಯಲ್ಲಿನ ಗೃಹ ಕಚೇರಿ ಆವರಣದಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಶಾಲೆಯ ಮುಖ್ಯಗುರುಗಳೊಂದಿಗೆ ಮಹತ್ವದ ಸಭೆ ನಡೆಸಿದರು.

ಸಭೆಯಲ್ಲಿ ಕ್ಷೇತ್ರದ ಎಲ್ಲಾ ಪ್ರೌಢಶಾಲೆಗಳ ಕಳೆದ ವರ್ಷದ ಮತ್ತು ಪೂರ್ವಸಿದ್ಧತಾ ಪರೀಕ್ಷೆಗಳ ಫಲಿತಾಂಶ, ವಿಷಯವಾರು ಸಾಧನೆ, ಉತ್ತೀರ್ಣ ಪ್ರಮಾಣ, ವಿದ್ಯಾರ್ಥಿಗಳ ಹಾಜರಾತಿ, ಕಲಿಕಾ ಹಿಂದುಳಿದಿರುವಿಕೆ, ಶಿಕ್ಷಕರ ಕೊರತೆ, ಮೂಲಸೌಕರ್ಯ ಸಮಸ್ಯೆಗಳು ಸೇರಿದಂತೆ ಹಲವಾರು ವಿಷಯಗಳ ಕುರಿತು ಸುದೀರ್ಘ ಚರ್ಚೆ ನಡೆಸಿದರು. ಕೆಲವು ಶಾಲೆಗಳಲ್ಲಿ ಫಲಿತಾಂಶ ಕುಸಿತಕ್ಕೆ ಕಾರಣವಾಗಿರುವ ಅಂಶಗಳನ್ನು ಗುರುತಿಸಿ, ಅವುಗಳನ್ನು ತ್ವರಿತವಾಗಿ ಸರಿಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ವಿಶೇಷವಾಗಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಬೋಧನಾ ತರಗತಿಗಳು, ಪುನರಾವರ್ತನಾ ಪಾಠಗಳು,



ವಿಶೇಷ ಮಾರ್ಗದರ್ಶನ ಶಿಬಿರಗಳು, ಮಾದರಿ ಪ್ರಶ್ನೋತ್ತರಗಳ ಅಭ್ಯಾಸ, ವಾರಾಂತ್ಯ ವಿಶೇಷ ತರಗತಿಗಳ ಆಯೋಜನೆ ಸೇರಿದಂತೆ ಹಲವು ಶೈಕ್ಷಣಿಕ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕೆಂದು ಹೇಳಿದರು.

ಶಿಕ್ಷಣ ಸಮಾಜದ ಬೆಳವಣಿಗೆಯ ಮೂಲಾಧಾರ. ಎಸ್ಸೆಸ್ಸೆಲ್ಸಿ ಹಂತವು ವಿದ್ಯಾರ್ಥಿಗಳ ಜೀವನದಲ್ಲಿ ಅತ್ಯಂತ ಮಹತ್ವದ್ದಾಗಿರುತ್ತದೆ. ಯಾವುದೇ ಕಾರಣಕ್ಕೂ ನಮ್ಮ ಕ್ಷೇತ್ರದ ಮಕ್ಕಳ ಭವಿಷ್ಯಕ್ಕೆ ಧಕ್ಕೆಯಾಗಬಾರದು. ಫಲಿತಾಂಶ ಸುಧಾರಣೆಗಾಗಿ ಅಧಿಕಾರಿಗಳು, ಶಿಕ್ಷಕರು ಮತ್ತು ಪೋಷಕರು ಒಂದೇ ತಂಡವಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ನಾನು ಶಿಕ್ಷಣದ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಟ್ಟಿದ್ದು, ಶಾಲೆ ಕಾಲೇಜುಗಳಿಗೆ ಯಾವುದೇ ರೀತಿಯ ಕೊರತೆಗಳು ಎದುರಾಗದಂತೆ ನೋಡಿಕೊಳ್ಳುತ್ತಿದ್ದೇನೆ. ಆದರೆ ಪ್ರತಿ ವರ್ಷ ಫಲಿತಾಂಶ ಸುಧಾರಿಸುವ ಬದಲಿಗೆ ಹಿನ್ನೆಡೆಯಾಗುತ್ತಿದೆ. ಗ್ರಾಮ ಸಂಚಾರದಲ್ಲಿ ಶಾಲೆಗಳಿಗೆ ಭೇಟಿ ನೀಡಿದಾಗ ಕೆಲವು ಶಾಲೆಗಳಲ್ಲಿ 2-3 ಮಕ್ಕಳಿರುವುದು ಕಂಡು ಬಂದಿದೆ. ಇದಕ್ಕೆಲ್ಲ ಅಧಿಕಾರಿಗಳು ಮತ್ತು ಶಿಕ್ಷಕರ ನಿರ್ಲಕ್ಷ್ಯವೇ ಕಾರಣವೆಂದು ಆಕ್ರೋಶ ಹೊರ ಹಾಕಿದರು.

ಪರೀಕ್ಷೆ ಎದುರಿಸುವ ಎಲ್ಲ ಮಕ್ಕಳು ಕಡ್ಡಾಯವಾಗಿ ಉತ್ತೀರ್ಣರಾಗಲೇಬೇಕು. ಯಾವೊಬ್ಬ ಮಗುವು ಅನುತ್ತೀರ್ಣರಾಗದಂತೆ ನೋಡಿಕೊಳ್ಳುವುದು ಶಿಕ್ಷಕರ ಹೊಣೆಯಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಕ್ಷಕರ ಹಾಜರಾತಿ, ಪಾಠ ಬೋಧನೆಯ ಗುಣಮಟ್ಟ, ವಿದ್ಯಾರ್ಥಿಗಳ ಪ್ರಗತಿ ಪರಿಶೀಲನೆ, ನಿರಂತರ ಮೌಲ್ಯಮಾಪನ ವ್ಯವಸ್ಥೆಗಳ ಮೇಲೆ ಕಟ್ಟುನಿಟ್ಟಿನ ಮೇಲ್ವಿಚಾರಣೆ ವಹಿಸಬೇಕೆಂದು ಹೇಳಿದರು.

ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಳವಾಗಬೇಕು. ಶಿಕ್ಷಕರು ಗ್ರಾಮದ ಮನೆ-ಮನೆಗೆ ಭೇಟಿ ನೀಡಿ ಮಕ್ಕಳನ್ನು ದಾಖಲಿಸುವಂತೆ ಮನವೊಲಿಸಬೇಕು. ಉತ್ತಮ ಶಿಕ್ಷಣ ನೀಡುತ್ತೇವೆಂದು ಭರವಸೆ ನೀಡಬೇಕು. ಶಿಕ್ಷಣಕ್ಕಾಗಿ ಏನು ಬೇಕೋ ಎಲ್ಲವನ್ನು ಕೊಡಲು ಸಿದ್ಧ. ಆದರೆ ನೀವು ನನಗೆ ಉತ್ತಮ ಫಲಿತಾಂಶ ನೀಡಬೇಕು. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಭರ್ತಿಯಿರುವಂತೆ ನೋಡಿಕೊಳ್ಳಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಿದರು.

ಸಭೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಜೆ ರಂಗೇಶ, ಕ್ಷೇತ್ರ ಸಮನ್ವಯಾಧಿಕಾರಿ ಪ್ರಕಾಶ ರಾಠೋಡ, ಬಿಸಿಯೂಟ ಅಧಿಕಾರಿ ಧೂಳಪ್ಪ, ಯಶವಂತ ಡೊಂಬಾಳೆ, ಬಾಲಾಜಿ ಅಮರವಾಡಿ, ರಾಜಕುಮಾರ ಡೊಂಗ್ರೆ, ಸಂಜಯ ಮೇತ್ರೆ, ಮಹಾದೇವ ಚಿಟಗೇರೆ, ಬಸವರಾಜ ಪಾಟೀಲ, ವಿಶ್ವನಾಥ ಬಿರಾದಾರ, ಸೂರ್ಯಕಾಂತ ಬಿರಾದರ, ತುಕಾರಾಮ ಬೇಂದ್ರೆ, ರಾಜಕುಮಾರ ನಾಯಕವಾಡೆ, ಶಶಿಕಂತ ಬಿಡವೆ, ಬಾಲಾಇ ಜಾಧವ, ಪಂಡರಿ ಆಡೆ ಸೇರಿದಂತೆ ಇಲಾಖೆಯ ವಿವಿಧ ಅಧಿಕಾರಿಗಳು, ಶಿಕ್ಷಕರ ಸಂಘದ ಪ್ರಮುಖರು ಹಾಗೂ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮುಖ್ಯಗುರುಗಳು ಸಭೆಯಲ್ಲಿದ್ದರು.

ಶೀಘ್ರದಲ್ಲೇ ರಾಗಿ ಖರೀದಿ ಆರಂಭ : ಜಿಲ್ಲಾಧಿಕಾರಿ ಮಾಹಿತಿ

ವಿಜಯನಗರ,ಜ.23-

ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ರಾಗಿ ಮತ್ತು ಬಿಳಿ ಜೋಳ ಖರೀದಿಸಲು ಒಟ್ಟು 9 ನೊಂದಣಿ ಮತ್ತು ಖರೀದಿ ಕೇಂದ್ರ ಸ್ಥಾಪನೆ ಮಾಡಲಾಗಿದೆ. ಅದರಂತೆ ಈಗಾಗಲೇ ರಾಗಿ ಖರೀದಿಗೆ ನೊಂದಣಿ ಪ್ರಕ್ರಿಯೆಯೂ ಸಹ ಆರಂಭವಾಗಿದೆ. ಜಿಲ್ಲೆಯ ವಿವಿಧ ನೊಂದಣಿ ಕೇಂದ್ರಗಳಲ್ಲಿ 13,694 ರೈತರಿಂದ 4,02410 ಕ್ವಿಂಟಾಲ್ ರಾಗಿ, 392 ರೈತರಿಂದ 33637 ಕ್ವಿಂಟಾಲ್ ಬಿಳಿ ಜೋಳ ಖರೀದಿಗೆ ನೊಂದಾಯಿಕೊಂಡಿದ್ದಾರೆ. ನೊಂದಣಿ ಮಾಡಿಕೊಂಡ ರೈತರಿಂದ ಶೀಘ್ರದಲ್ಲೇ ರಾಗಿ ಖರೀದಿ ಪ್ರಕ್ರಿಯೆ ಆರಂಬಿಸಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ತಿಳಿಸಿದರು.

ಬೆಂಬಲ ಬೆಲೆ ಯೋಜನೆಯಡಿ ರಾಗಿ ಮತ್ತು ಬಿಳಿ ಜೋಳ ಖರೀದಿ ಕುರಿತ ಆಯೋಜಿಸಲಾಗಿದ್ದ ಎಂಎಸ್‌ಪಿ ಜಿಲ್ಲಾ ಟಾಸ್ಕ್‌ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬೆಂಬಲ ಬೆಲೆ ಯೋಜನೆಯಡಿ ಉತ್ಪನ್ನ ಮಾರಾಟಕ್ಕೆ ರೈತರು ತಮ್ಮ ಹೆಸರನ್ನು 'ಫ್ರೂಟ್ಸ್' ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಂಡಿರಬೇಕು. ನೊಂದಣಿ ಮಾಡಿಕೊಂಡಿರುವ ರೈತರಿಗೆ ಸರ್ಕಾರದ



ಆದೇಶದನ್ವಯ ಪ್ರತಿ ಎಕರೆಗೆ ಕನಿಷ್ಠ 10 ಕ್ವಿಂಟಾಲ್‌ನಿಂದ ಗರಿಷ್ಠ 10 ಕ್ವಿಂಟಾಲ್ ರಾಗಿಯನ್ನು ಪ್ರತಿ ಕ್ವಿಂಟಾಲ್ ರೂ.4886 ನಂತೆ ಖರೀದಿಸಲಾಗುವುದು. ಅದರಂತೆ ಬಿಳಿಜೋಳ (ಹೈಬ್ರಿಡ್) ರೂ.3699 ಮತ್ತು ಮಾಲ್ದಂಡಿ ಜೋಳ ರೂ.3749 ನಂತೆ ಪ್ರತಿ ಎಕರೆಗೆ ಕನಿಷ್ಠ 15 ಕ್ವಿಂಟಾಲ್‌ನಿಂದ ಗರಿಷ್ಠ 150 ಕ್ವಿಂಟಾಲ್ ಖರೀದಿಸಲಾಗುವುದು. ಮಾರುಕಟ್ಟೆಯಲ್ಲಿ ರೈತರಿಂದ ಗುಣಮಟ್ಟದ ಧಾನ್ಯ ಖರೀದಿಗೆ ಹೆಚ್ಚಿನ ಆದ್ಯತೆ ನೀಡಬೇಕು. ರೈತರು ನೊಂದಣಿಗೆ ತರುವ ಧಾನ್ಯಗಳಲ್ಲಿ ಕಸ ಇರಬಾರದು. ಖರೀದಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ಜರಡಿ ಯಂತ್ರಗಳನ್ನು ಅಳವಡಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಒಂದು ವೇಳೆ ಕಳಪೆ ಗುಣಮಟ್ಟದ ದಾಸ್ತಾನು ಖರೀದಿಸಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು. ಖರೀದಿ ಕೇಂದ್ರಗಳಲ್ಲಿ ರೈತರಿಗೆ ಸಮರ್ಪಕ ನೆರಳು, ಶುದ್ದ ಕುಡಿಯುವ ನೀರು ಮತ್ತು ಆಸನ ವ್ಯವಸ್ಥೆ ಕಲ್ಪಿಸಬೇಕು ಎಂದು ತಾಕೀತು ಮಾಡಿದರು. ಈ ನಿಟ್ಟನಲ್ಲಿ ರೈತರು ಸಹ ಉತ್ತಮ ಗುಣಮಟ್ಟದ ರಾಗಿ ಮತ್ತು ಜೋಳ ಮಾರಾಟಕ್ಕೆ ನೊಂದಾಯಿಸಕೊಳ್ಳುವಂತೆ ತಿಳಿಸಿದರು. ಜಿಲ್ಲೆಯಲ್ಲಿ ರೈತರಿಂದ ಖರೀದಿ ಸಿದ ಧಾನ್ಯ ಸಂಗ್ರಹಿಸಲು ಗೋದಾಮುಗಳಲ್ಲಿ ಸಾಕಷ್ಟು ಸ್ಥಳಾವಕಾಶವಿದೆ. ಆದ್ದರಿಂದ ಅಗತ್ಯತೆಗೆ ತಕ್ಕಂತೆ ದಾಸ್ತಾನು ಮಾಡಲು ಸೂಚಿಸಿದರು. ಒಂದು ವೇಳೆ ಹೆಚ್ಚುವರಿ ಗೋದಾಮುಗಳ ಅಗತ್ಯವಿದ್ದಲ್ಲಿ ನೆರೆ ಜಿಲ್ಲೆಗಳಲ್ಲಿನ ಎಪಿಎಂಸಿ ಗೋದಾಮುಗಳನ್ನು ಜಿಲ್ಲಾಧಿಕಾರಿಗಳ ಅನುಮತಿಯ ಮೇರೆಗೆ ಪಡೆಯಲು ಅವಕಾಶವಿದೆ. ಬೇಕಾದಲ್ಲಿ ಸಂಬಂದಪಟ್ಟ ಅಧಿಕಾರಿಗಳು ಪತ್ರ ವ್ಯವಹಾರ ನಡೆಸಿ ಗೋದಾಮುಗಳ ಬಳಕೆ ಮಾಡಕೊಳ್ಳಲು ಅನುಮತಿ ನೀಡಲಾಗುವುದು ಎಂದರು.

ಸಭೆಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಉಪನಿರ್ದೇಶಕ ರಿಯಾಜ್, ಎಪಿಎಂಸಿ ಅಧಿಕಾರಿ ಓಂಕಾರಪ್ಪ, ಜಿಲ್ಲಾ ವ್ಯವಸ್ಥಾಪಕ ಗುರಪ್ಪ ಕಣಬೂರ್ ಸೇರಿದಂತೆ ವಿವಿಧ ಖರೀದಿ ಕೇಂದ್ರಗಳ ವ್ಯವಸ್ಥಾಪಕರು ಇದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ರಾಜಭವನಗಳು ರಾಜಕೀಯ ಪಕ್ಷಪಾತದ ನೆಲೆವೀಡು; ರಾಜ್ಯಪಾಲ ಹುದ್ದೆಯ ಮರುವಿಮರ್ಶೆ ನಡೆಯಲಿ



ರಾಜ್ಯಪಾಲರ ಹುದ್ದೆಯನ್ನು ಅಲಂಕರಿಸುವವರು ಬದುಕಿನ ಯಾವುದಾದರೂ ಕ್ಷೇತ್ರದಲ್ಲಿ ಗಣ್ಯರು ಎನಿಸಿಕೊಂಡಿರಬೇಕು ಎಂಬುದು ಸರ್ಕಾರಿಯಾ ಆಯೋಗದ ಶಿಫಾರಸು. ಈ ಶಿಫಾರಸನ್ನು ಅನುಸರಿಸಿದ್ದಕ್ಕಿಂತ ಗಾಳಿಗೆ ತೂರಿರುವುದೇ ಹೆಚ್ಚು. ಈ ಗಣ್ಯ ಸ್ಥಾನಮಾನ ಏನೆಂಬ ಸಡಿಲ ವ್ಯಾಖ್ಯಾನ ಕೂಡ ನಮ್ಮ ನಡುವೆ ಇಲ್ಲ. ರಾಜಕೀಯ ಕೃಪಾಪೋಷಣೆಯೇ ಏಕೈಕ ಗಣ್ಯಮಾನ್ಯ ಅರ್ಹತೆಯಾಗಿ ಪರಿಣಮಿಸಿದೆ.

ಕೇಂದ್ರ ಸರ್ಕಾರದಿಂದ ನೇಮಕವಾಗುವ ರಾಜ್ಯಪಾಲರು ಸ್ವತಂತ್ರ ಭಾರತದ ಉದ್ದಕ್ಕೂ ಸದಾ ತಪ್ಪು ಕಾರಣಗಳಿಗಾಗಿಯೇ ಸುದ್ದಿಯಲ್ಲಿರುತ್ತ ಬಂದಿದ್ದಾರೆ. ಕಳೆದ ಹನ್ನೆರಡು ವರ್ಷಗಳಲ್ಲಿ ಈ ದುರುಪಯೋಗ ಶಿಖರ ಮುಟ್ಟಿದೆ. ಕಳೆದ ಕೆಲ ದಿನಗಳಿಂದ ದಕ್ಷಿಣ ರಾಜ್ಯಗಳಾದ ಕರ್ನಾಟಕ, ಕೇರಳ ಹಾಗೂ ತಮಿಳುನಾಡು ರಾಜ್ಯಪಾಲರು ಮತ್ತೆ ಮತ್ತೆ ವಿವಾದಕ್ಕೆ ಸಿಲುಕಿದ್ದಾರೆ. ಈ ಮೂರೂ ರಾಜ್ಯಗಳಲ್ಲಿ ಬಿಜೆಪಿಯೇತರ ಸರ್ಕಾರಗಳಿವೆ ಎಂಬುದು ಈ ಬೆಳವಣಿಗೆಯ ಬಹುಮುಖ್ಯ ಸಂಗತಿ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷವೇ ಈ ಮೂರೂ ರಾಜ್ಯಗಳಲ್ಲಿ ಅಧಿಕಾರದಲ್ಲಿ ಇದ್ದಿದ್ದರೆ ಈ ವಿವಾದಗಳು ನಡೆಯುತ್ತಿದ್ದವೇ ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ ಉತ್ತರ ಕಂಡುಕೊಳ್ಳುವುದು ಬಲು ಸುಲಭ.

ರಾಜ್ಯಪಾಲರನ್ನಾಗಿ ಯಾರೆಲ್ಲರನ್ನು ನೇಮಕ ಮಾಡುತ್ತ ಬರಲಾಗಿದೆ ಎಂದು ಗಮನಿಸೋಣ. ಮುಖ್ಯಮಂತ್ರಿ ಹುದ್ದೆಗೆ ಪರಿಗಣಿಸದೆ ಅವಗಣಿಸಲ್ಪಟ್ಟವರು, ತರಲೆ ಕಿರಿಕಿರಿ ಮಾಡುತ್ತಾನೆಂದು ಹೆಸರು ಪಡೆದ ರಾಜಕಾರಣಿ, ನಿವೃತ್ತ ಐಎಎಸ್-ಐಪಿಎಸ್-ಐಎಫ್‌ಎಸ್ ಅಧಿಕಾರಿಗಳು, ನಿವೃತ್ತ ನ್ಯಾಯಮೂರ್ತಿಗಳು, ನಿವೃತ್ತ ಸೇನಾಧಿಕಾರಿಗಳು ಹಾಗೂ ಮತದಾರರಿಂದ ತಿರಸ್ಕರಿಸಲ್ಪಟ್ಟ ರಾಜಕಾರಣಿಗಳೇ ಈ ಪಟ್ಟಿಯನ್ನು ಕಿಕ್ಕಿರಿಯುತ್ತ ಬಂದಿದ್ದಾರೆ. ಪ್ರಧಾನಮಂತ್ರಿ ಅಥವಾ ಪ್ರಧಾನಿಯ ಸಮೀಪವರ್ತಿಗಳ ವಿಶ್ವಾಸ ಗಳಿಸಬೇಕಿರುವುದು ರಾಜ್ಯಪಾಲರಾಗಿ ನಿಯುಕ್ತಿಗೊಳ್ಳಲು ಅಗತ್ಯವಾಗಿ ಬೇಕಿರುವ ಮೂಲಭೂತ ಅರ್ಹತೆ. ಪ್ರಧಾನಮಂತ್ರಿ ತಮಗೆ ಬೇಕಿರುವ ಯಾವ ವ್ಯಕ್ತಿಯನ್ನಾದರೂ ಈ ಹುದ್ದೆಗೆ ನೇಮಕ ಮಾಡಬಹುದಾಗಿದೆ ಎಂಬುದು ಈವರೆಗಿನ ರಾಜಕೀಯ ಇತಿಹಾಸ ಸ್ಪಷ್ಟಪಡಿಸಿರುವ ಅಂಶ. ವ್ಯಕ್ತಿ ಎಷ್ಟೇ ಗಣ್ಯ ಎನಿಸಿದರೂ ರಾಜಕೀಯ ಆಶ್ರಯ ಇರಲೇಬೇಕು. ಕಳೆದ 10-12 ವರ್ಷಗಳಿಂದ ಸಂಘಪರಿವಾರಕ್ಕೆ ಸೇರಿದ ವ್ಯಕ್ತಿಗಳನ್ನೂ ಈ ಹುದ್ದೆಗಳಿಗೆ ನೇಮಕ ಮಾಡಿರುವ ಹಲವು ನಿದರ್ಶನಗಳಿವೆ. ತಮ್ಮ ಕುಟುಂಬದ ಸದಸ್ಯರಿಗೆ, ಬಂಧುಬಳಗಕ್ಕೆ ಹುದ್ದೆಗಳು, ಸೀಟುಗಳು, ಉದ್ಯೋಗಗಳು, ವಿದೇಶಯಾತ್ರೆಯ ಅವಕಾಶಗಳನ್ನು ಗಿಟ್ಟಿಸಿಕೊಳ್ಳಲು ರಾಜ್ಯಪಾಲರ ಸ್ಥಾನವನ್ನು ದುರುಪಯೋಗಪಡಿಸಿಕೊಂಡವರೇ ಹೆಚ್ಚು. ಈ ಕುರಿತು ಮೀಡಿಯಾದಲ್ಲಿ ವರದಿಯಾಗಿರುವ ಅಕ್ರಮಗಳನ್ನು ಪಟ್ಟಿ ಮಾಡಿದರೂ ನೂರಾರು ಪುಟಗಳ ಪುಸ್ತಕ ಆದೀತು.

ರಾಜ್ಯಪಾಲರ ಹುದ್ದೆಯನ್ನು ಅಲಂಕರಿಸುವವರು ಬದುಕಿನ ಯಾವುದಾದರೂ ಕ್ಷೇತ್ರದಲ್ಲಿ ಗಣ್ಯರು ಎನಿಸಿಕೊಂಡಿರಬೇಕು ಎಂಬುದು ನಿವೃತ್ತ ನ್ಯಾಯಾಧೀಶ ಆರ್.ಎಸ್. ಸರ್ಕಾರಿಯಾ ಆಯೋಗದ ಶಿಫಾರಸು. ಈ ಶಿಫಾರಸನ್ನು ಅನುಸರಿಸಿದ್ದಕ್ಕಿಂತ ಗಾಳಿಗೆ ತೂರಿರುವುದೇ ಹೆಚ್ಚು. ಈ ಗಣ್ಯ ಸ್ಥಾನಮಾನ ಏನೆಂಬ ಸಡಿಲ ವ್ಯಾಖ್ಯಾನ ಕೂಡ ನಮ್ಮ ನಡುವೆ ಇಲ್ಲ. ರಾಜಕೀಯ ಕೃಪಾಪೋಷಣೆಯೇ ಏಕೈಕ ಗಣ್ಯಮಾನ್ಯ ಅರ್ಹತೆಯಾಗಿ ಪರಿಣಮಿಸಿದೆ.

ಆರ್ಥಿಕವಾಗಿ ರಾಜ್ಯಪಾಲರ ಹುದ್ದೆಗಳು ಈ ದೇಶದ ಬಡ ತೆರಿಗೆದಾರನ ರಂಧ್ರಗಳೇ ತುಂಬಿರುವ ಕಿಸೆಯ ಮೇಲೆ ಹೊರಿಸಿದ ಬಿಳಿಯಾನೆಗಳಾಗಿ ಪರಿಣಮಿಸಿವೆ. ಲೋಕಭವನಗಳು (ಇತ್ತೀಚಿನವರೆಗೆ ರಾಜಭವನಗಳು) ಅಸಭ್ಯ ವೈಭೋಗ ಪ್ರದರ್ಶನ ಮತ್ತು ದುಂದುವೆಚ್ಚಗಳ ಬೇಜವಾಬ್ದಾರಿ ಧೋರಣೆಯ ಪ್ರತೀಕಗಳೇ ಆಗಿ ಹೋಗಿವೆ. ದೇಶದ ಅತ್ಯಂತ ವಿಲಾಸೀ ಹೋಟೆಲುಗಳಿಗಿಂತಲೂ ವಿಲಾಸಿ ವ್ಯವಸ್ಥೆಗಳನ್ನು ಲೋಕಭವನಗಳು ಹೊಂದಿವೆ. ಅರಸೊತ್ತಿಗೆ ಅಳಿದರೂ ತಲೆಯೆತ್ತಿ ನಿಂತಿರುವ ಜೀವಂತ ಅರಮನೆಗಳಾಗಿ ಹೋಗಿವೆ. ಇಂದಿಗೂ ಅಲ್ಲಿನ ಆಳುಕಾಳುಗಳು- ನೌಕರ ಚಾಕರಿಯವರು ಊಳಿಗಮಾನ್ಯ ಅರಸೊತ್ತಿಗೆಯನ್ನೇ ನೆನಪಿಗೆ ತರುತ್ತಾರೆ. ಬಣ್ಣಿಸಲೂ ಹೇಸಿಗೆ ಎನಿಸುವಷ್ಟು ವೈಭೋಗ ವಿಲಾಸವಿದು.

ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದ ಮಹಾತ್ಮ ಗಾಂಧಿ ವಂಶಜ ಗೋಪಾಲಕೃಷ್ಣ ಗಾಂಧಿಯಂತಹವರು ಈ ವಿಲಾಸೀ ವ್ಯವಸ್ಥೆಗೆ ಅಲ್ಲಲ್ಲಿ ಅಪರೂಪದ ಅಪವಾದಗಳಾಗಿದ್ದವರು. ಕೋಲ್ಕತ್ತಾದಲ್ಲಿ ವಿದ್ಯುತ್ ಸರಬರಾಜು ಕಡಿತವಿದ್ದಾಗ ರಾಜಭವನದ ದೀಪಗಳನ್ನು ಆರಿಸಿ ತಾವೂ ಕತ್ತಲಲ್ಲಿ ಕಳೆಯುತ್ತಿದ್ದವರಾಗಿದ್ದರು ಗೋಪಾಲಕೃಷ್ಣ ಗಾಂಧಿ.

28 ರಾಜ್ಯಗಳು ಮತ್ತು ಎಂಟು ಕೇಂದ್ರಾಡಳಿತ ಪ್ರದೇಶಗಳಿಗೆ ಅಷ್ಟೇ ಸಂಖ್ಯೆಯ ರಾಜ್ಯಪಾಲರು ಮತ್ತು ಉಪರಾಜ್ಯಪಾಲರಿದ್ದಾರೆ. 36 ರಾಜಭವನಗಳ ವಾರ್ಷಿಕ ವೆಚ್ಚವನ್ನು ಆಯಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಬಜೆಟ್ಟಿನಲ್ಲೇ ಮೀಸಲಿಡಲಾಗುತ್ತದೆ. ಅರ್ಥಾತ್ ಆಯಾ ರಾಜ್ಯಗಳ ಜನರ ತೆರಿಗೆ ಹಣದಿಂದಲೇ ಭರಿಸಲಾಗುತ್ತದೆ. ಕೇಂದ್ರದ ಕಣ್ಣು ಕಿವಿ ಮೂಗುಗಳಾಗಿ ಕೆಲಸ ಮಾಡುತ್ತಾರೆ ಈ ರಾಜ್ಯಪಾಲರು. ಪ್ರತಿಪಕ್ಷಗಳ ಆಡಳಿತ ಹೊಂದಿರುವ ರಾಜ್ಯಗಳಲ್ಲಿ ಅಪ್ಪಟ ಕೇಂದ್ರ ಸರ್ಕಾರದ ಏಜೆಂಟರಾಗಿ ಕೆಲಸ ಮಾಡುತ್ತಾರೆ. ರಾಜಕೀಯ ಬಿಕ್ಕಟ್ಟುಗಳು ಮತ್ತು ಪಕ್ಷಾಂತರಗಳ ಸಂದರ್ಭದಲ್ಲಿ ವಿರೋಧಪಕ್ಷಗಳ ಸರ್ಕಾರಗಳನ್ನು ಅಸ್ಥಿರಗೊಳಿಸಿ ಕಟ್ಟಕಡೆಗೆ ಉರುಳಿಸಲು ಕೇಂದ್ರ ಸರ್ಕಾರದ ಕೈಯಲ್ಲಿನ ದಾಳಗಳಾಗಿ ದುರ್ಬಳಕೆ ಆಗುತ್ತಾರೆ. ಅದೇ ಪಕ್ಷದ ಸರ್ಕಾರಗಳಿದ್ದರೆ ಪ್ರಧಾನಿಯ ವಿರುದ್ಧ, ಅದೇ ಪಕ್ಷದ ಯಾವುದೇ ಮುಖ್ಯಮಂತ್ರಿ, ಅಥವಾ ಪ್ರಾದೇಶಿಕ ನಾಯಕ ತಲೆಯೆತ್ತದಂತೆ ಹತ್ತಿಕ್ಕಲು ಬಳಕೆಯಾಗುತ್ತಾರೆ. ಕೇಂದ್ರದಲ್ಲಿ ಆಡಳಿತ ನಡೆಸುವ ಪಕ್ಷ, ನಿರ್ದಿಷ್ಟ ರಾಜ್ಯಗಳಲ್ಲಿ ವಿರೋಧ ಪಕ್ಷಗಳಾಗಿದ್ದಲ್ಲಿ, ಆ ಪಕ್ಷಗಳು ಇಲ್ಲವೇ ಆ ಪಕ್ಷಗಳ ರಾಜ್ಯ ನಾಯಕರ ಭ್ರಷ್ಟಾಚಾರಗಳು- ಅಕ್ರಮ- ಅನಾಚಾರಗಳಿಗೆ ಮುಸುಕು ಹೊದಿಸುವ ಘನ ಕಾರ್ಯಸೂಚಿಯನ್ನೂ ಬಹುತೇಕ ರಾಜ್ಯಪಾಲರು ಹೊಂದಿರುತ್ತಾರೆ. ರಾಜ್ಯ ಸರ್ಕಾರಗಳು ವಜಾ ಆದಾಗ ಕೇಂದ್ರ ಸರ್ಕಾರ ಘೋಷಿಸುವ ರಾಷ್ಟ್ರಪತಿ ಆಡಳಿತವನ್ನು ರಾಜ್ಯಪಾಲರೇ ನೆರವೇರಿಸುತ್ತಾರೆ. ಈ ಘನ ಕಾರ್ಯವನ್ನು ರಾಜ್ಯಪಾಲರು ಇಬ್ಬರು ಸಲಹೆಗಾರರ ನೆರವಿನಿಂದ ನಿರ್ವಹಿಸುತ್ತಾರೆ. ಈ ಸಲಹೆಗಾರರು ಹಿರಿಯ ನಿವೃತ್ತ ಅಥವಾ ಸೇವಾನಿರತ ಅಧಿಕಾರಿಗಳೇ ಆಗಿರುತ್ತಾರೆ. ರಾಷ್ಟ್ರಪತಿ ಆಳ್ವಿಕೆಯ ಅಪರೂಪದ ಸಂದರ್ಭಗಳಲ್ಲಿ ಪ್ರಧಾನಮಂತ್ರಿಯೇ ನೇರವಾಗಿ ಈ ಸಲಹೆಗಾರರ ಮೂಲಕ ಆಡಳಿತ ನಡೆಸಬಹುದು ಎಂಬ ಅಭಿಮತವೂ ಉಂಟು.

ಈ ಹಿಂದೆ ರಾಜ್ಯಪಾಲರು ಒಮ್ಮೆ ನೇಮಕವಾದರೆ ಬಹುತೇಕ ಅವಧಿ ಪೂರೈಸುವುದು ಖಚಿತವಿರುತ್ತಿತ್ತು. ಆದರೆ ಈಗ ಮೋದಿ ಯುಗದಲ್ಲಿ ಪರಿಸ್ಥಿತಿ ಬೇರೆಯೇ ಆಗಿದೆ. ಮೋದಿ-ಶಾ ಜೋಡಿಯ ಕಾರ್ಯಸೂಚಿಯನ್ನು ಸರಿಯಾಗಿ ಜಾರಿಗೆ ತರದಿದ್ದರೆ ಅಂತಹ ರಾಜ್ಯಪಾಲರ ಕುರ್ಚಿಗಳು ಅಲ್ಲಾಡುತ್ತವೆ. ಈ ಕಟುಸತ್ಯದ ಅರಿವು ರಾಜ್ಯಪಾಲರಿಗೆ ಇದೆ. ಹೀಗಾಗಿ ಅವರು ತಮಗೆ ನೀಡಲಾಗಿರುವ ಗುರಿಯನ್ನು ಮುಟ್ಟಲು ಸದಾ ಸೆಣೆಸುವ ಒತ್ತಡದಲ್ಲಿರುತ್ತಾರೆ. ಅದನ್ನು ಬಿಟ್ಟರೆ ಅವರಿಗೆ ಬೇರೆ ಏನೂ ಕಾಣದು. ವಾಸ್ತವವಾಗಿ ರಾಜ್ಯಪಾಲರು ಸ್ವೀಕರಿಸುವ ಪ್ರಮಾಣವಚನ ಏನು ಎಂಬುದನ್ನು ಮತ್ತೊಮ್ಮೆ ಇಲ್ಲಿ ನೆನಪಿಸಿಕೊಳ್ಳುವುದು ಅತ್ಯಂತ ಪ್ರಸ್ತುತ.

ಭಾರತದ ಸಂವಿಧಾನದ 159ನೆಯ ವಿಧಿಯ ಪ್ರಕಾರ ರಾಜ್ಯಪಾಲರು ಆಯಾ ರಾಜ್ಯ ಹೈಕೋರ್ಟಿನ ಮುಖ್ಯನ್ಯಾಯಮೂರ್ತಿ ಅಥವಾ ಜ್ಯೇಷ್ಠ ನ್ಯಾಯಮೂರ್ತಿಯಿಂದ ಪ್ರಮಾಣವಚನ ಸ್ವೀಕರಿಸುತ್ತಾರೆ. ಸಂವಿಧಾನ ಮತ್ತು ಕಾನೂನನ್ನು ಸಂರಕ್ಷಿಸಿ ಕಾಪಾಡಿ ಸಮರ್ಥಿಸಿಕೊಳ್ಳುವ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ನೆರವೇರಿಸುವುದಾಗಿ ಸಾರುತ್ತಾರೆ. ನಿರ್ದಿಷ್ಟ ರಾಜ್ಯದ ಹೆಸರು ಹೇಳಿ, ಆ ರಾಜ್ಯದ ಜನರ ಯೋಗಕ್ಷೇಮಕ್ಕಾಗಿ ತಮ್ಮ ಸೇವೆಯನ್ನು ಮುಡಿಪಾಗಿಡುವುದಾಗಿ ಪ್ರಮಾಣ ಮಾಡುತ್ತಾರೆ.

ರಾಜ್ಯಪಾಲರ ಹುದ್ದೆಗಳಿಗೆ ನೇಮಕ ಆಗುವವರು ನಿಜವಾಗಿಯೂ ಸಂವಿಧಾನವನ್ನು ಮತ್ತು ನೆಲದ ಕಾನೂನನ್ನು ಎತ್ತಿ ಹಿಡಿಯುತ್ತಿದ್ದಾರೆಯೇ? ಉದಾಹರಣೆಗೆ ಕರ್ನಾಟಕ ರಾಜ್ಯದ ರಾಜ್ಯಪಾಲರು ನಿಜವಾಗಿಯೂ ಕರ್ನಾಟಕ ರಾಜ್ಯದ ಜನರ ಯೋಗಕ್ಷೇಮಕ್ಕಾಗಿ ತಮ್ಮ ಸೇವೆಯನ್ನು ಮುಡಿಪಾಗಿ ಇರಿಸಿದ್ದಾರೆಯೇ?

ಇಂದಿನ ರಾಜಕೀಯ-ಆಡಳಿತ-ಶಾಸಕಾಂಗ- ನ್ಯಾಯಾಂಗ ವ್ಯವಸ್ಥೆ ಕೇಳಿಕೊಳ್ಳಲೇಬೇಕಿರುವ ಜ್ವಲಂತ ಪ್ರಶ್ನೆಗಳಿವು. ಉತ್ತರ ಇಲ್ಲವೆಂದು ಆದಲ್ಲಿ, ಸರಿಪಡಿಸಲು ಕ್ರಮ ಕೈಗೊಳ್ಳಬೇಕೇ ಇಲ್ಲವೇ ರಾಜ್ಯಪಾಲ ಹುದ್ದೆಗಳನ್ನೇ ರದ್ದುಪಡಿಸಬೇಕೇ ಎಂಬ ಕುರಿತು ವ್ಯಾಪಕ ಚರ್ಚೆ ನಡೆಯುವುದು ಅತ್ಯಗತ್ಯ.

ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿಯಾಗಿ ನಿವೃತ್ತರಾಗಿರುವ ಎ.ರವೀಂದ್ರ, ರಾಜ್ಯಪಾಲರ ಹುದ್ದೆಯನ್ನೇ ರದ್ದು ಮಾಡುವುದು ಲೇಸು ಎಂದಿದ್ದಾರೆ. ''ಸಂವಿಧಾನದ ಅಡಿಯಲ್ಲಿ ರಾಜ್ಯಪಾಲರು ತಾವಾಗಿಯೇ ಸ್ವತಂತ್ರವಾಗಿ ನಿರ್ವಹಿಸಬಹುದಾದ ಯಾವ ಕೆಲಸ ಕಾರ್ಯಗಳೂ ಇಲ್ಲವೇ ಇಲ್ಲ'' ಎಂಬ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಾತನ್ನು ರವೀಂದ್ರ ಉಲ್ಲೇಖಿಸಿದ್ದಾರೆ. ಹೀಗಿದ್ದಾಗ ತೆರಿಗೆದಾರನಿಗೆ ಹೊರೆಯಾಗುವ ಈ ಅಲಂಕಾರಿಕ ಹುದ್ದೆ ಇರಬೇಕಾದರೂ ಯಾಕೆ ಎಂಬುದು ಅವರ ಪ್ರಶ್ನೆ.

ಸಂವಿಧಾನಕ್ಕೆ ಹಲವು ತಿದ್ದುಪಡಿಗಳನ್ನು ತರಬೇಕಾದೀತು. ಈ ಹುದ್ದೆಯು ರಾಜ್ಯ ಸರ್ಕಾರಗಳ ಬೊಕ್ಕಸಗಳ ಮೇಲೆ ಅನಗತ್ಯ ಹೊರೆ. ರಾಜ್ಯಪಾಲರ ಸಿಬ್ಬಂದಿಯನ್ನು ಸಾಕಲು ಮತ್ತು ರಾಜಭವನದ ನಿರ್ವಹಣೆಗೆಂದು ವರ್ಷಕ್ಕೆ ಗಣನೀಯ ಪ್ರಮಾಣದ ವೆಚ್ಚ ಮಾಡಬೇಕಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧದಲ್ಲಿ ಮುಳ್ಳಾಗಿ ಪರಿಣಮಿಸಿರುವ ಹುದ್ದೆಯಿದು. ಬ್ರಿಟಿಷ್ ವಸಾಹತುಶಾಹಿ ಪಳೆಯುಳಿಕೆ. ಈ ಭವ್ಯ ರಾಜಭವನಗಳನ್ನು ವಿಶಾಲ ಉದ್ಯಾನಗಳನ್ನಾಗಿಯೋ, ಆಯಾ ರಾಜ್ಯಗಳ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ವಸ್ತುಸಂಗ್ರಹಾಲಯಗಳನ್ನಾಗಿಯೋ, ಆರ್ಟ್ ಗ್ಯಾಲರಿಗಳನ್ನಾಗಿಯೋ ಪರಿವರ್ತಿಸಬಹುದು ಎಂಬ ಅವರ ಸಲಹೆ ಗಂಭೀರ ಪರಿಶೀಲನೆಗೆ ಅರ್ಹವಾದದ್ದು.

ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ರಾಜ್ಯಪಾಲರ ಹುದ್ದೆಯನ್ನು ಮರುವಿಮರ್ಶೆಗೆ, ಮರುವ್ಯಾಖ್ಯಾನಕ್ಕೆ ಒಳಪಡಿಸುವ ತುರ್ತು ಅಗತ್ಯವಿದೆ.

ಕೋವಿಡ್ ಲಸಿಕೆ ಲೂಟಿಯ ಕುಬೇರನಿಗೆ ಆರ್‌ಸಿಬಿ ಮೇಲೆ ಕಣ್ಣು!

ಆರ್‌ಸಿಬಿ ಈಗಾಗಲೇ ಮದ್ಯದ ಕಂಪನಿಗಳ ಒಡೆತನದಿಂದಾಗಿ ಬಾರ್‌ಸಿಬಿ ಎಂಬ ಟೀಕೆಗಳನ್ನು ಎದುರಿಸಿತ್ತು. ಈಗ ಲಸಿಕೆ ಲಾಭಕೋರತನದ ಆರೋಪ ಹೊತ್ತಿರುವ ಪೂನಾವಾಲಾ ಕೈಗೆ ತಂಡ ಸೇರಿದರೆ, ತಂಡದ ವರ್ಚಸ್ಸು ಪಾತಾಳಕ್ಕೆ ಕುಸಿಯುವ ಭೀತಿಯಿದೆ. 11 ಅಭಿಮಾನಿಗಳ ಸಾವಿನ ಕಳಂಕ ಹೊತ್ತಿರುವ ತಂಡವನ್ನು, ಜನರ ಸಂಕಷ್ಟದಲ್ಲಿ ಲಾಭ ಮಾಡಿಕೊಂಡ ವ್ಯಕ್ತಿಯೊಬ್ಬ ಖರೀದಿಸಿದರೆ ಅದು ದುರಂತದ ಪರಮಾವಧಿ



ದೇಶವೇ ಕೊರೋನಾ ಹೆಮ್ಮಾರಿಯ ಕರಾಳ ನೃತ್ಯಕ್ಕೆ ತತ್ತರಿಸಿ ಸ್ಮಶಾನ ಸದೃಶವಾಗಿದ್ದಾಗ, ಲಸಿಕೆಯ ಅನಿವಾರ್ಯತೆಯನ್ನೇ ಬಂಡವಾಳ ಮಾಡಿಕೊಂಡು ಜನಸಾಮಾನ್ಯರ ಜೇಬು ಕತ್ತರಿಸಿ, ಆ ಹಣದಲ್ಲಿ ಲಂಡನ್‌ನಲ್ಲಿ 1400 ಕೋಟಿ ರೂ.ಗಳ ಐಷಾರಾಮಿ ಬಂಗಲೆ ಖರೀದಿಸಿ ಮೋಜಿನ ಜೀವನ ನಡೆಸುತ್ತಿರುವ ವ್ಯಾಕ್ಸಿನ್ ಪ್ರಿನ್ಸ್ ಆದಾರ್ ಪೂನಾವಾಲಾ ಮತ್ತೆ ಸುದ್ದಿಯಲ್ಲಿದ್ದಾರೆ. ಈಗ ಐಪಿಎಲ್‌ನ ಕನ್ನಡಿಗರ ತಂಡ ಎಂದೇ ಹೆಸರಾಗಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವನ್ನು ಖರೀದಿಸಲು ಮುಂದಾಗಿರುವುದು ಕ್ರೀಡಾಭಿಮಾನಿಗಳಲ್ಲಿ ಆತಂಕ ಮತ್ತು ಆಕ್ರೋಶಕ್ಕೆ ಕಾರಣವಾಗಿದೆ.

ಕಳೆದ ವರ್ಷವಷ್ಟೇ (2025) ಆರ್‌ಸಿಬಿ ತನ್ನ ಬಹುಕಾಲದ ಕನಸಿನ ಐಪಿಎಲ್ ಟ್ರೋಫಿಯನ್ನು ಗೆದ್ದಿತಾದರೂ, ಆ ಸಂಭ್ರಮಾಚರಣೆಯು 11 ಮುಗ್ಧ ಅಭಿಮಾನಿಗಳ ದುರಂತ ಸಾವಿನ ಮೂಲಕ ರಕ್ತಸಿಕ್ತ ಅಧ್ಯಾಯವಾಗಿ ಇತಿಹಾಸ ಸೇರಿತು. ಈ 11 ಸಾವುಗಳ ಕಳಂಕ ಇನ್ನೂ ಹಸಿಹಸಿಯಾಗಿರುವಾಗಲೇ, ಈಗ ವಿವಾದಾತ್ಮಕ ಉದ್ಯಮಿಯೊಬ್ಬರ ಪ್ರವೇಶವು ತಂಡದ ಮೇಲಿರುವ ಕಳಂಕವನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆಯಿದೆ ಎಂಬ ಮಾತುಗಳು ಕ್ರಿಕೆಟ್ ವಲಯದಲ್ಲಿ ಕೇಳಿಬರುತ್ತಿವೆ.

ಲಸಿಕೆ ಲೂಟಿ ಮತ್ತು ಲಂಡನ್ ಪಲಾಯನ!

ಆದಾರ್ ಪೂನಾವಾಲಾ ಅವರ ಸೀರಮ್ ಇನ್‌ಸ್ಟಿಟ್ಯೂಟ್ ತಯಾರಿಸಿದ ಕೋವಿಶೀಲ್ಡ್ ಲಸಿಕೆ, ಸಾಂಕ್ರಾಮಿಕದ ಸಮಯದಲ್ಲಿ ಜಗತ್ತಿನ ಅತಿ ದೊಡ್ಡ ವ್ಯಾಪಾರವಾಗಿ ಪರಿಣಮಿಸಿತು. ಸರ್ಕಾರಕ್ಕೆ ಒಂದು ದರ, ಖಾಸಗಿ ಆಸ್ಪತ್ರೆಗಳಿಗೆ ದುಬಾರಿ ದರ ನಿಗದಿಪಡಿಸಿ, ಜನರ ಪ್ರಾಣಭಯವನ್ನೇ ಲಾಭದ ಸರಕಾಗಿಸಿಕೊಂಡ ಆರೋಪ ಪೂನಾವಾಲಾ ಮೇಲಿದೆ. ದೇಶದಲ್ಲಿ ಬೆಡ್‌ಗಳಿಲ್ಲದೆ, ಆಕ್ಸಿಜನ್ ಇಲ್ಲದೆ ಜನ ನರಳಾಡುತ್ತಿದ್ದಾಗ, ಇತ್ತ ಪೂನಾವಾಲಾ ತಮ್ಮ ಸಂಪತ್ತನ್ನು ಬಹುಪಟ್ಟು ಹೆಚ್ಚಿಸಿಕೊಂಡರು.

ಅಷ್ಟೇ ಅಲ್ಲ, ತಮಗೆ ಭಾರತದಲ್ಲಿ ಬೆದರಿಕೆ ಇದೆ ಎಂಬ ನೆಪವೊಡ್ಡಿ ಲಂಡನ್‌ಗೆ ಹಾರಿದ ಅವರು, ಅಲ್ಲಿನ ಮೇಫೇರ್‌ನಲ್ಲಿ ಬರೋಬ್ಬರಿ 1446 ಕೋಟಿ ರೂಪಾಯಿ ಮೌಲ್ಯದ ಐಷಾರಾಮಿ ಅಬರ್‌ಕಾನ್ವೇ ಹೌಸ್ ಖರೀದಿಸಿ, ಅಲ್ಲಿಯೇ ನೆಲೆನಿಂತರು. ಭಾರತದ ಮಣ್ಣಿನ ಸಂಪನ್ಮೂಲ ಮತ್ತು ಇಲ್ಲಿನ ಜನರ ಹಣದಿಂದ ಸಾಮ್ರಾಜ್ಯ ಕಟ್ಟಿ, ಕಷ್ಟಕಾಲದಲ್ಲಿ ದೇಶ ತೊರೆದು ವಿದೇಶಿ ಮೋಜಿನಲ್ಲಿ ಮುಳುಗಿದ ಪೂನಾವಾಲಾ, ಈಗ ಅದೇ ಭಾರತದ ಅತ್ಯಂತ ಜನಪ್ರಿಯ ಐಪಿಎಲ್ ತಂಡದ ಮೇಲೆ ಕಣ್ಣಿಟ್ಟಿರುವುದು ಅವರ ಅತಿಯಾದ ವ್ಯಾಪಾರಿ ಮನಸ್ಥಿತಿಯನ್ನು ತೋರಿಸುತ್ತದೆ.

11 ಸಾವುಗಳ ಕಳಂಕ ಮತ್ತು ಆರ್‌ಸಿಬಿ

ಕಳೆದ ಜೂನ್ 2025ರಲ್ಲಿ ಆರ್‌ಸಿಬಿ ಐಪಿಎಲ್ ಗೆದ್ದಾಗ ನಡೆದ ಸಂಭ್ರಮಾಚರಣೆಯಲ್ಲಿ ಉಂಟಾದ ಕಾಲ್ತುಳಿತದಲ್ಲಿ 11 ಜನ ಅಮಾಯಕ ಅಭಿಮಾನಿಗಳು ಪ್ರಾಣ ಕಳೆದುಕೊಂಡಿದ್ದು ಇನ್ನೂ ಯಾರೂ ಮರೆತಿಲ್ಲ. ಆರ್‌ಸಿಬಿಯ ಟ್ರೋಫಿಯ ಮೇಲೆ ಈ 11 ಜನರ ನೆತ್ತರಿನ ಕಲೆ ಶಾಶ್ವತವಾಗಿ ಉಳಿದಿದೆ. ಮದ್ಯದ ದೊರೆಗಳ ಕಪಿಮುಷ್ಟಿಯಲ್ಲಿದ್ದ ತಂಡವು, ಆ ದುರಂತದ ನಂತರ ನೈತಿಕವಾಗಿ ಕುಗ್ಗಿಹೋಗಿದೆ. ಇಂತಹ ಸಂದರ್ಭದಲ್ಲಿ, ತಂಡಕ್ಕೆ ಬೇಕಿರುವುದು ಕ್ರೀಡಾ ಸ್ಫೂರ್ತಿಯನ್ನು ಎತ್ತಿಹಿಡಿಯುವ, ಅಭಿಮಾನಿಗಳ ನೋವಿಗೆ ಸ್ಪಂದಿಸುವ ಮಾಲೀಕರೇ ಹೊರತು, ಪ್ರತಿಯೊಂದರಲ್ಲೂ ಲಾಭದ ಲೆಕ್ಕಾಚಾರ ಹಾಕುವ ಕಾರ್ಪೊರೇಟ್ ಕುಳಗಳಲ್ಲ.

ಆದರೆ, ಡಿಯಾಜಿಯೊ () ಕಂಪನಿ ತಂಡವನ್ನು ಮಾರಾಟಕ್ಕಿಟ್ಟ ತಕ್ಷಣವೇ ಹದ್ದುಗಳಂತೆ ಮುಗಿಬಿದ್ದವರಲ್ಲಿ ಪೂನಾವಾಲಾ ಮೊದಲಿಗರು. ಈಗಾಗಲೇ ಲಸಿಕೆ ಲಾಭದ ಹಣದಲ್ಲಿ ವಿದೇಶಿ ಬಂಗಲೆ ಸೇರಿರುವ ಅವರಿಗೆ, ಆರ್‌ಸಿಬಿ ಎಂಬುದು ಕನ್ನಡಿಗರ ಅಭಿಮಾನದ ತಂಡವಾಗಿ ಕಾಣುತ್ತಿಲ್ಲ; ಬದಲಿಗೆ ಇದೊಂದು ಮತ್ತಷ್ಟು ಹಣ ಹೂಡಿ, ದುಪ್ಪಟ್ಟು ಲಾಭ ಗಳಿಸುವ ಅಸೆಟ್ () ಆಗಿ ಮಾತ್ರ ಕಾಣುತ್ತಿದೆ.

ಕಳಂಕದ ಮೇಲೆ ಮತ್ತಷ್ಟು ಕಳಂಕ?

ಆರ್‌ಸಿಬಿ ಈಗಾಗಲೇ ಮದ್ಯದ ಕಂಪನಿಗಳ ಒಡೆತನದಿಂದಾಗಿ ಬಾರ್‌ಸಿಬಿ ಎಂಬ ಟೀಕೆಗಳನ್ನು ಎದುರಿಸಿತ್ತು. ಈಗ ಲಸಿಕೆ ಲಾಭಕೋರತನದ ಆರೋಪ ಹೊತ್ತಿರುವ ಪೂನಾವಾಲಾ ಕೈಗೆ ತಂಡ ಸೇರಿದರೆ, ತಂಡದ ವರ್ಚಸ್ಸು ಪಾತಾಳಕ್ಕೆ ಕುಸಿಯುವ ಭೀತಿಯಿದೆ. ''11 ಅಭಿಮಾನಿಗಳ ಸಾವಿನ ಕಳಂಕ ಹೊತ್ತಿರುವ ತಂಡವನ್ನು, ಜನರ ಸಂಕಷ್ಟದಲ್ಲಿ ಲಾಭ ಮಾಡಿಕೊಂಡ ವ್ಯಕ್ತಿಯೊಬ್ಬ ಖರೀದಿಸಿದರೆ ಅದು ದುರಂತದ ಪರಮಾವಧಿಯಾಗಲಿದೆ'' ಎನ್ನುವುದು ಹಲವರ ಬೇಸರಕ್ಕೆ ಕಾರಣವಾಗಿದೆ.

ಕ್ರೀಡೆಯು ಭಾವನೆಗಳ ವಿಷಯವೇ ಹೊರತು ಕೇವಲ ಬ್ಯಾಲೆನ್ಸ್ ಶೀಟ್ ಅಲ್ಲ. ಆದರೆ ಪೂನಾವಾಲಾ ಅವರ ಟ್ರ್ಯಾಕ್ ರೆಕಾರ್ಡ್ ನೋಡಿದರೆ, ಅವರಿಗೆ ಜನರ ಭಾವನೆಗಳಿಗಿಂತ ರಿಟರ್ನ್ ಆನ್ ಇನ್ವೆಸ್ಟ್‌ಮೆಂಟ್ ಮುಖ್ಯ ಎಂಬುದು ಸಾಬೀತಾಗಿದೆ. ಲಂಡನ್‌ನಲ್ಲಿ ಕುಳಿತು ರಿಮೋಟ್ ಕಂಟ್ರೋಲ್ ಮೂಲಕ ತಂಡವನ್ನು ಮುನ್ನಡೆಸಲು ಹೊರಟಿರುವ ಅವರಿಗೆ, ಚಿನ್ನಸ್ವಾಮಿ ಕ್ರೀಡಾಂಗಣದ ಗೇಟ್‌ನಲ್ಲಿ ಪ್ರಾಣಬಿಟ್ಟ 11 ಅಭಿಮಾನಿಗಳ ಕುಟುಂಬದ ನೋವು ಅರ್ಥವಾಗಲಿದೆಯೇ? ಎಂಬುದು ಯಕ್ಷಪ್ರಶ್ನೆ.

ಅಂತಿಮವಾಗಿ ಹೇಳುವುದಾದರೆ, ಲಸಿಕೆ ಮಾರಾಟದ ಹಣ, ಲಂಡನ್ ಐಷಾರಾಮಿ ಜೀವನ ಮತ್ತು ಈಗ ಕ್ರಿಕೆಟ್ ತಂಡದ ಖರೀದಿ ಈ ಮೂರೂ ಬೆಳವಣಿಗೆಗಳನ್ನು ಗಮನಿಸಿದರೆ, ಪೂನಾವಾಲಾ ಪಾಲಿಗೆ ಭಾರತ ಕೇವಲ ಒಂದು ಮಾರುಕಟ್ಟೆ ಮಾತ್ರ. ಈಗಾಗಲೇ 11 ಸಾವುಗಳ ಭಾರದಿಂದ ನೊಂದಿರುವ ಆರ್‌ಸಿಬಿ, ಇಂತಹ ಲಾಭಬಾಕತನದ ಕೈಗೆ ಸಿಕ್ಕರೆ ಮತ್ತಷ್ಟು ಅಧಃಪತನ ಕಾಣುವುದರಲ್ಲಿ ಸಂಶಯವಿಲ್ಲ.

ಪಾಲ್ಘರ್ ಪಾದಯಾತ್ರೆ ; ಕಿವಿಯಿಲ್ಲದ ಸರ್ಕಾರಕ್ಕೆ ಕಾಲ್ನಡಿಗೆಯ ಸವಾಲು!

ಎರಡು ದಿನಗಳಲ್ಲಿ 55 ಕಿಲೋಮೀಟರ್ ನಡೆದು ಜನವರಿ 21ರಂದು ಪಾಲ್ಘರ್ ಕಲೆಕ್ಟರ್ ಕಚೇರಿಯನ್ನು ತಲುಪಿದ್ದರು. ಅಲ್ಲಿ ಅನಿರ್ದಿಷ್ಟಕಾಲದ ಧರಣಿ ನಡೆಸಿದ್ದರು. ಪೊಲೀಸರು ಅವರನ್ನು ಕಚೇರಿ ಆವರಣಕ್ಕೆ ಬಿಡದಿದ್ದರಿಂದ ರಸ್ತೆಯನ್ನು ಬ್ಲಾಕ್ ಮಾಡಿ ಪ್ರತಿಭಟನೆ ಮಾಡಿದ್ದರು. ಜನವರಿ 21ರ ರಾತ್ರಿ ಸರ್ಕಾರಿ ಅಧಿಕಾರಿಗಳೊಂದಿಗೆ ಮಾತುಕತೆ ನಡೆದ ನಂತರ, ಕೆಲವು ಬೇಡಿಕೆಗಳನ್ನು ಒಪ್ಪಿಕೊಳ್ಳಲಾಯಿತು. ಜನವರಿ 22ರಂದು ಪ್ರತಿಭಟನೆಯನ್ನು ನಿಲ್ಲಿಸಲಾಯಿತು.

ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ದೊಡ್ಡ ಪ್ರತಿಭಟನೆ, ಪಾದಯಾತ್ರೆಯ ಬಗ್ಗೆ ನೀವು ಕೇಳಿರಬಹುದು. ಸುಮಾರು 50,000ಕ್ಕೂ ಹೆಚ್ಚು ಬುಡಕಟ್ಟು ಜನರು, ರೈತರು ಮತ್ತು ಕೃಷಿ ಕೂಲಿಕಾರರು ಚಾರೋಟಿಯಿಂದ ಪಾಲ್ಘರ್ ಕಲೆಕ್ಟರ್ ಕಚೇರಿಗೆ ಸುಮಾರು 55 ಕಿಲೋಮೀಟರ್ ನಡೆದುಕೊಂಡು ಬಂದರು. ಇದನ್ನು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್‌ಸಿಸ್ಟ್) ಅಥವಾ ಸಿಪಿಐ(ಎಂ) ಸಂಘಟಿಸಿತ್ತು. ಈ ಯಾತ್ರೆ ಜನವರಿ 19, 2026ರಿಂದ ಪ್ರಾರಂಭವಾಗಿ, ಜನವರಿ 22ರಂದು ಕೊನೆಗೊಂಡಿತು.

ಪಾಲ್ಘರ್ ಜಿಲ್ಲೆಯ ಕಾಡು ಬೆಟ್ಟಗಳಿಂದ ನೋವು, ಹಸಿವು, ಕೋಪ, ನಿರಾಶೆ ಎಲ್ಲವನ್ನೂ ಹೊತ್ತು ಜನರು ಹೊರಟಿದ್ದರು. ಬುಡಕಟ್ಟು ಜನರು, ಸಣ್ಣ ರೈತರು, ಕೃಷಿ ಕೂಲಿಕಾರರು, ಹೆಣ್ಣು ಮಕ್ಕಳು, ವೃದ್ಧರು, ಮಕ್ಕಳೂ ಸೇರಿ ನೂರಾರು ಕಿಲೋಮೀಟರ್ ಪಾದಯಾತ್ರೆ ಮಾಡಿದ್ದಾರೆ. ಇದೇ ಯಾತ್ರೆ ಮತ್ತೆ ಮತ್ತೆ ಯಾಕೆ? ಇವರು ಯಾವಾಗಲೂ ನಡೆದು ಬರಬೇಕಾದ ಜನರೇ? ಅವರ ಬೇಡಿಕೆಗಳನ್ನು ಕೇಳುವವರೇ ಇಲ್ಲವೇ? ಎಂಬ ಪ್ರಶ್ನೆಗಳು ಜನಸಾಮಾನ್ಯರನ್ನ ಕಾಡುವುದು ಸಹಜ.ಪಾಲ್ಘರ್ ಪ್ರಕೃತಿಯಿಂದ ಶ್ರೀಮಂತ, ಆದರೆ ಜನರು ಬಡವರು. ಕಾಡಿದೆ, ಬೆಟ್ಟ ಇದೆ, ಮಳೆ ಇದೆ. ಆದರೆ ಭೂಮಿ ಮಾತ್ರ ಅವರ ಹೆಸರಿಗಿಲ್ಲ.

ಅರಣ್ಯ ಹಕ್ಕು ಕಾಯ್ದೆ ಇದೆ ಅಂತೆ. ಆದರೆ ಕಾನೂನು ಪುಸ್ತಕದಲ್ಲಿ ಮಾತ್ರ. ನೆಲದಲ್ಲಿನ ಪರಿಸ್ಥಿತಿ ಬೇರೆಯೇ ಇದೆ. ಅಲ್ಲಿ ಇನ್ನೂ ಕೇಸು, ಪೊಲೀಸ್ ಭೀತಿ, ''ಅತಿಕ್ರಮಣದಾರ'' ಅನ್ನೋ ಮುದ್ರೆಯನ್ನ ಒತ್ತಲಾಗಿದೆ. ಒಂದು ಸರ್ಕಾರ ತನ್ನದೇ ಜನರನ್ನ ಕಳ್ಳರಂತೆ ನೋಡಿದರೆ ಅದು ಆಡಳಿತವೇ? ಅಥವಾ ಅಧಿಕಾರದ ದರ್ಪವೇ? ಒಂದು ಕ್ಷಣ ಯೋಚಿಸಿ. ನಾವು ಹುಟ್ಟಿದ ಮನೆಯಲ್ಲೇ ನಮಗೆ ''ಇದು ನಿನ್ನದಲ್ಲ'' ಅಂದರೆ ಹೇಗಿರುತ್ತೆ, ಆ ನೋವನ್ನೇ ಈ ಜನರು ದಿನವೂ ಬದುಕುತ್ತಿರುವುದು.

ಜನವರಿ 19, 2026ರಂದು ಪಾಲ್ಘರ್ ಜಿಲ್ಲೆಯ ಚಾರೋಟಿ ನಾಕಾದಿಂದ ಈ ದೊಡ್ಡ ಪಾದಯಾತ್ರೆ, ಪ್ರಾರಂಭವಾಯಿತು. ಸಿಪಿಐ(ಎಂ) ನಾಯಕರು ಹಾಗೂ ಅಲ್ ಇಂಡಿಯಾ ಕಿಸಾನ್ ಸಭಾ (ಎಐಕೆಎಸ್) ಸದಸ್ಯರು ಮುನ್ನಡೆಸಿದರು. ಈ ಪಾದಯಾತ್ರೆಯಲ್ಲಿ ಪಾಲ್ಗೊಂಡವರು ಬುಡಕಟ್ಟು ಸಮುದಾಯದವರು, ರೈತರು, ಕೃಷಿ ಕೂಲಿಕಾರರು, ಮಹಿಳೆಯರು ಯುವಕರು ಮತ್ತು ಮಕ್ಕಳು. ಅವರು ಎರಡು ದಿನಗಳಲ್ಲಿ 55 ಕಿಲೋಮೀಟರ್ ನಡೆದು ಜನವರಿ 21ರಂದು ಪಾಲ್ಘರ್ ಕಲೆಕ್ಟರ್ ಕಚೇರಿಯನ್ನು ತಲುಪಿದ್ದರು. ಅಲ್ಲಿ ಅನಿರ್ದಿಷ್ಟಕಾಲದ ಧರಣಿ ನಡೆಸಿದ್ದರು. ಪೊಲೀಸರು ಅವರನ್ನು ಕಚೇರಿ ಆವರಣಕ್ಕೆ ಬಿಡದಿದ್ದರಿಂದ ರಸ್ತೆಯನ್ನು ಬ್ಲಾಕ್ ಮಾಡಿ ಪ್ರತಿಭಟನೆ ಮಾಡಿದ್ದರು. ಜನವರಿ 21ರ ರಾತ್ರಿ ಸರ್ಕಾರಿ ಅಧಿಕಾರಿಗಳೊಂದಿಗೆ ಮಾತುಕತೆ ನಡೆದ ನಂತರ, ಕೆಲವು ಬೇಡಿಕೆಗಳನ್ನು ಒಪ್ಪಿಕೊಳ್ಳಲಾಯಿತು. ಜನವರಿ 22ರಂದು ಪ್ರತಿಭಟನೆಯನ್ನು ನಿಲ್ಲಿಸಲಾಯಿತು. ಈ ಯಾತ್ರೆಯಲ್ಲಿ ಕೆಂಪು ಬಾವುಟಗಳು, ಘೋಷಣೆಗಳು ಮತ್ತು ಸಾಮೂಹಿಕ ಹಾಡುಗಳು ಕೇಳಿ ಬಂದವು. ಸಿಪಿಐ(ಎಂ) ನಾಯಕ ಅಶೋಕ್ ಧವಳೆ ಹೇಳಿದಂತೆ, ''ಇದು ನಮ್ಮ ಹಕ್ಕುಗಳಿಗಾಗಿ ನಡೆಯುತ್ತಿರುವ ಹೋರಾಟವಾಗಿದೆ''.

ಸರ್ಕಾರಗಳೂ ಬದಲಾಗುತ್ತಿವೆ, ಅಧಿಕಾರದಲ್ಲಿರುವ ಪಕ್ಷಗಳೂ ಬದಲಾಗುತ್ತಿವೆ. ಆದರೆ ಪಾಲ್ಘರ್‌ನ ಬುಡಕಟ್ಟು ಜನರ ಬದುಕು ಮಾತ್ರ ಏಕೆ ಹಾಗೆಯೇ ಉಳಿದಿದೆ. ಪಾಲ್ಘರ್ ಜಿಲ್ಲೆ ಮುಂಬೈಗೆ ಹತ್ತಿರವೇ ಇದೆ. ಒಂದು ಕಡೆ ದೇಶದ ಆರ್ಥಿಕ ರಾಜಧಾನಿ, ಇನ್ನೊಂದು ಕಡೆ ಹಕ್ಕುಗಳಿಲ್ಲದ ಜನ. ಕಾಡು, ಬೆಟ್ಟ, ಮಳೆ, ಹಸಿರು ಎಲ್ಲವೂ ಇದೆ. ಆದರೆ ಭೂಮಿ ಅವರದ್ದಾಗಿಲ್ಲ. ತಲೆಮಾರುಗಳಿಂದ ಕೃಷಿ ಮಾಡಿದ ಜಮೀನುಗಳಿಗೂ ಸರಿಯಾದ ದಾಖಲೆಗಳಿಲ್ಲ.

ಅರಣ್ಯ ಹಕ್ಕು ಕಾಯ್ದೆ ಬಂದೂ ವರ್ಷಗಳಾದರೂ, ''ಈ ಭೂಮಿ ನಮ್ಮದು'' ಎಂಬ ಕಾಗದ ಇನ್ನೂ ಇವರ ಕೈಗೆ ಬಂದಿಲ್ಲ. ಹಾಗಂತ ಇದು ಮೊದಲ ಯಾತ್ರೆಯಲ್ಲ. 2018ರಲ್ಲಿ ನಡೆದ ''ಕಿಸಾನ್ ಲಾಂಗ್ ಮಾರ್ಚ್'' ನೆನಪಿರಬಹುದು. ಆಗಲೂ ಇದೇ ಪಾಲ್ಘರ್ ನಾಶಿಕ್ ಭಾಗದ ರೈತರು ಮುಂಬೈವರೆಗೆ ನಡೆದು ಬಂದಿದ್ದರು. ಇದು ಮಹಾರಾಷ್ಟ್ರದ ನಾಸಿಕ್‌ನಿಂದ ಮುಂಬೈಗೆ ನಡೆದ ದೊಡ್ಡ ಪಾದಯಾತ್ರೆಯಾಗಿತ್ತು. ಸಿಪಿಐ(ಎಂ) ಮತ್ತು ಅಲ್ ಇಂಡಿಯಾ ಕಿಸಾನ್ ಸಭಾ (ಎಐಕೆಎಸ್) ಸಂಘಟಿಸಿದ್ದ ಈ ಯಾತ್ರೆಯಲ್ಲಿ ಸುಮಾರು 25,000ರಿಂದ 70,000ಕ್ಕೂ ಹೆಚ್ಚು ರೈತರು, ಬುಡಕಟ್ಟು ಜನರು, ಕೃಷಿ ಕೂಲಿಕಾರರು ಮತ್ತು ಮಹಿಳೆಯರು ಭಾಗವಹಿಸಿದ್ದರು. ಆಗ ಭರವಸೆಗಳು ಸಿಕ್ಕಿದ್ದವು. ಆದರೆ ಭರವಸೆಗಳು ಕಾಗದದಲ್ಲೇ ಉಳಿದವು. ಪ್ರತಿ ಬಾರಿ ಸರ್ಕಾರಗಳು ಹೇಳಿದ್ದು ಒಂದೇ. ಪರಿಶೀಲನೆ ಮಾಡುತ್ತೇವೆ, ಸಮಿತಿ ರಚಿಸುತ್ತೇವೆ. ಹಂತ ಹಂತವಾಗಿ ಸಮಸ್ಯೆ ಬಗೆಹರಿಸುತ್ತೇವೆ ಅಂತ. ಆದರೆ ನೆಲಮಟ್ಟದಲ್ಲಿ ಏನೂ ಬದಲಾಗಲಿಲ್ಲ. ಆದ್ದರಿಂದ ಈ ಜನರಿಗೆ ಗೊತ್ತಿರುವ ಒಂದು ಭಾಷೆ ಅಂದರೆ ಅದು ನಡಿಗೆಯ ಭಾಷೆ.

ಮುಖ್ಯ ಬೇಡಿಕೆಗಳು ಏನು?

ಇವರ ಬೇಡಿಕೆಗಳು ಅತಿರೇಕವಾದವು ಅಲ್ಲ. ಐಶಾರಾಮಿ ಬದುಕಿಗಾಗಿ ಕೇಳುವ ಬೇಡಿಕೆಗಳೂ ಅಲ್ಲ. ಅರಣ್ಯ ಹಕ್ಕು ಕಾಯ್ದೆಯಡಿ ಭೂಮಿಯ ಹಕ್ಕು ಪತ್ರ ಮಾತ್ರ.

ಅರಣ್ಯ ಹಕ್ಕುಗಳ ಕಾಯ್ದೆ (): ಬುಡಕಟ್ಟು ಜನರಿಗೆ ಕಾಡು ಭೂಮಿಯ ಹಕ್ಕುಗಳನ್ನು ನೀಡುವುದು. ತಲೆಮಾರುಗಳಿಂದ ಬೇಸಾಯ ಮಾಡುತ್ತಿರುವ ಜಮೀನಿಗೆ ಕಾನೂನು ಮಾನ್ಯತೆ.

ಭೂಮಿ ಹಕ್ಕುಗಳು: ದೇವಾಲಯ, ಇನಾಮ್ ಮತ್ತು ಸರ್ಕಾರಿ ಭೂಮಿಯನ್ನು ನಿಜವಾದ ಬೆಳೆಗಾರರ ಹೆಸರಿಗೆ ಬದಲಾಯಿಸುವುದು. : ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪುನಃಸ್ಥಾಪಿಸಿ ಮತ್ತು ಬಲಪಡಿಸುವುದು. ಉದ್ಯೋಗ ದಿನಗಳನ್ನು ಹೆಚ್ಚಿಸುವುದು.

ಸ್ಮಾರ್ಟ್ ಮೀಟರ್ ಯೋಜನೆ: ವಿದ್ಯುತ್ ಸ್ಮಾರ್ಟ್ ಮೀಟರ್‌ಗಳನ್ನು ರದ್ದುಮಾಡುವುದು, ಏಕೆಂದರೆ ಅದು ರೈತರಿಗೆ ಹೊರೆಯಾಗುತ್ತದೆ.

ಕಾರ್ಮಿಕ ಕೋಡ್‌ಗಳು: ನಾಲ್ಕು ಹೊಸ ಕಾರ್ಮಿಕ ಕಾನೂನುಗಳನ್ನು ಹಿಂಪಡೆಯಿರಿ, ಅದು ಕೂಲಿಕಾರರ ಹಕ್ಕುಗಳನ್ನು ಕಸಿದುಕೊಳ್ಳುತ್ತದೆ.

ಬಂದರು ಯೋಜನೆಗಳು: ವಧವನ್ ಮತ್ತು ಮುರ್ಬೆ ಬಂದರುಗಳನ್ನು ರದ್ದುಮಾಡಿ. ಅದು ಪರಿಸರಕ್ಕೆ ಹಾನಿ ಮಾಡಿ, ಮೀನುಗಾರರ ಜೀವನನ್ನ ನಾಶ ಮಾಡುತ್ತದೆ.

ಬೆಳೆಗಳಿಗೆ ನ್ಯಾಯಸಮ್ಮತ ಬೆಲೆ ಕೊಡುವುದು. ಕನಿಷ್ಠ ಬೆಂಬಲ ಬೆಲೆ ಕೇವಲ ಘೋಷಣೆಯಾಗದೇ ಜಾರಿಗೆ ಬರಬೇಕು. ಕುಡಿಯುವ ನೀರು, ನೀರಾವರಿ, ಶಿಕ್ಷಣ, ಉದ್ಯೋಗ, ರೇಷನ್, ಆರೋಗ್ಯ ಸೌಲಭ್ಯಗಳು. ಕಾಯ್ದೆ (ಪಂಚಾಯತ್ ಎಕ್ಸ್‌ಟೆನ್ಷನ್ ಟು ಶೆಡ್ಯೂಲ್ಡ್ ಏರಿಯಾಸ್) ಅನುಷ್ಠಾನದಂತಹ ಮೂಲಭೂತ ಸೌಲಭ್ಯಗಳನ್ನ ಒದಗಿಸುವುದು. ಇವುಗಳಲ್ಲಿ ಒಂದನ್ನೂ ಸಂಪೂರ್ಣವಾಗಿ ಜಾರಿಗೊಳಿಸಿಲ್ಲ ಅನ್ನೋದೇ ಯಾತ್ರೆಗೆ ಮೂಲ ಕಾರಣವಾಗಿದೆ. ಈ ಬೇಡಿಕೆಗಳು ರೈತರ ದೈನಂದಿನ ಬದುಕಿನ ಸಮಸ್ಯೆಗಳನ್ನು ಪ್ರತಿಬಿಂಬಿಸುತ್ತವೆ. ಅವರು ಹೇಳುತ್ತಾರೆ, ''ಸರ್ಕಾರ ದೊಡ್ಡ ಕಂಪನಿಗಳನ್ನು ಬೆಂಬಲಿಸುತ್ತದೆ, ನಮ್ಮನ್ನು ಮರೆತಿದೆ'' ಅಂತ. ಅವರು ಕೇಳುತ್ತಿರುವುದು ಬದುಕುವ ಕನಿಷ್ಠ ಹಕ್ಕುಗಳನ್ನ. ಇದನ್ನೂ ಕೊಡಲಾರದೆ ಇರುವ ಸರ್ಕಾರ ಯಾವ ನೈತಿಕ ಹಕ್ಕಿನಿಂದ ''ವಿಕಸಿತ ಭಾರತ'' ಅಂತ ಮಾತಾಡುತ್ತಿದೆ?

ಈ ಪಾದಯಾತ್ರೆಯ ಪರಿಣಾಮಗಳು ಸ್ಥಳೀಯ ಮತ್ತು ರಾಜ್ಯ ಮಟ್ಟದಲ್ಲಿ ಕಾಣುತ್ತವೆ. ಮೊದಲನೆಯದಾಗಿ, ಸರ್ಕಾರ ಕೆಲವು ಬೇಡಿಕೆಗಳನ್ನು ಒಪ್ಪಿಕೊಂಡಿದೆ. ಪಾಲ್ಘರ್ ಜಿಲ್ಲಾ ಕಲೆಕ್ಟರ್ ಇಂದು ರಾಣಿ ಜಾಖರ್ ಅವರು ಕ್ಲೈಮ್‌ಗಳನ್ನು ಏಪ್ರಿಲ್ 30, 2026ರೊಳಗೆ ಪರಿಹರಿಲಾಗುವುದು, ಜಲ್ ಜೀವನ್ ಮಿಷನ್ ಕೆಲಸಗಳನ್ನು ಪುನರಾರಂಭಿಸುವುದು, ಭ್ರಷ್ಟಾಚಾರದ ವಿರುದ್ಧ ಕ್ರಮ, ಅನುಷ್ಠಾನ ಮತ್ತು ಖಾಲಿ ಹುದ್ದೆಗಳ ಭರ್ತಿ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ. ಸಂಯುಕ್ತ ಸಮಿತಿ ರಚಿಸಿ ಭೂಮಿ ನೋಂದಣಿಯನ್ನು ಮಾಡಿಕೊಡುವುದಾಗಿ ಹೇಳಿದ್ದಾರೆ. ಆದರೆ ರಾಜ್ಯ ಮಟ್ಟದ ಬೇಡಿಕೆಗಳು ಉದಾ: ಕಾರ್ಮಿಕ ಕೋಡ್‌ಗಳು, ಬಂದರುಗಳು ಇನ್ನೂ ಹಾಗೆಯೇ ಇದೆ. ಸಿಪಿಐ(ಎಂ) ಹೇಳಿದಂತೆ, ಹೋರಾಟ ಮುಂದುವರಿಯುತ್ತದೆ.

ಸರ್ಕಾರಗಳು ಯಾಕೆ ಕಿವಿಗೊಡುತ್ತಿಲ್ಲ?

ಒಂದು ಕಹಿ ಸತ್ಯ ಇಲ್ಲಿದೆ. ಬುಡಕಟ್ಟು ಜನರು ದೊಡ್ಡ ಮತಬ್ಯಾಂಕ್ ಅಲ್ಲ. ಅವರ ಬಳಿ ದೊಡ್ಡ ಹಣ ಇಲ್ಲ. ಟಿವಿ ಸ್ಟುಡಿಯೋಗಳಲ್ಲಿ ಕೂಗಿ ಮಾತನಾಡುವ ಶಕ್ತಿ ಇಲ್ಲ. ಅವರ ಸಮಸ್ಯೆಗಳು ಕೊಡಲ್ಲ, ಹೆಡ್ಲೈನ್ ಆಗಲ್ಲ. ನಗರಗಳ ರಾಜಕೀಯ, ಕಾರ್ಪೊರೇಟ್ ಹೂಡಿಕೆ, ಎಕ್ಸ್‌ಪ್ರೆಸ್‌ವೇ, ಬುಲೆಟ್ ಟ್ರೈನ್ ಇವೆಲ್ಲದರ ನಡುವೆ ಈ ಜನರ ಸಮಸ್ಯೆಗಳು ''ಅಪ್ರಿಯ ವಿಷಯ'' ಆಗುತ್ತಿವೆ. ಚುನಾವಣೆ ಬಂದಾಗ ಮಾತ್ರ ನೆನಪಾಗುವ ಜನರು ಇವರು. ಸಿಪಿಐ(ಎಂ) ಈ ಯಾತ್ರೆಯನ್ನು ಸಂಘಟಿಸುವುದು ಕೇವಲ ರಾಜಕೀಯ ಲಾಭಕ್ಕಾಗಿ ಅನ್ನೋ ಆರೋಪಗಳು ಕೇಳಿಬರುತ್ತವೆ. ಆದರೆ ಒಂದು ಪ್ರಶ್ನೆ ಇದೆ. ಸರ್ಕಾರಗಳು ಕೆಲಸ ಮಾಡಿದ್ದರೆ, ಯಾತ್ರೆಯ ಅವಶ್ಯಕತೆಯೇ ಬೀಳುತ್ತಿರಲಿಲ್ಲ. ಯಾತ್ರೆ ರಾಜಕೀಯವಾಗಬಹುದು. ಆದರೆ ಸಮಸ್ಯೆ ರಾಜಕೀಯವಲ್ಲ ಅಲ್ಲವೇ? ಅದು ಅವರ ಬದುಕಿನ ಪ್ರಶ್ನೆ. ಅಲ್ಲಿನ ಜನರು ತಮ್ಮ ಕೆಲಸ ಕಾರ್ಯಗಳನ್ನ ಬಿಟ್ಟು, ಹೊಟ್ಟೆ ಖಾಲಿ ಇಟ್ಟುಕೊಂಡು, ಮಕ್ಕಳನ್ನು ಜೊತೆ ಕರೆದುಕೊಂಡು ನಡೆದು ಬಂದಿದ್ದಾರೆ ಅಂದರೆ, ಅದು ಅವರ ''ಆಯ್ಕೆ'' ಅಲ್ಲ. ಅದು ಅವರ ಅಸಹಾಯಕತೆ. ಈ ಯಾತ್ರೆಯನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳದೇ ಹೋದರೆ ಪರಿಣಾಮಗಳು ಗಂಭೀರವಾಗಬಹುದು. ಗ್ರಾಮೀಣ ಅಸಮಾಧಾನ ಹೆಚ್ಚಾಗಬಹುದು. ಬುಡಕಟ್ಟು ಯುವಜನರಲ್ಲಿ ವ್ಯವಸ್ಥೆಯ ಮೇಲೆ ನಂಬಿಕೆ ಕಳೆದುಹೋಗಬಹುದು. ಶಾಂತ ಹೋರಾಟಗಳು ಕಠಿಣ ರೂಪ ಪಡೆಯುವ ಅಪಾಯ ಇದೆ. ನಗರಗ್ರಾಮಗಳ ಅಂತರ ಇನ್ನೂ ಹೆಚ್ಚಾಗಬಹುದು.

ಇದು ಕೇವಲ ಪಾಲ್ಘರ್ ಸಮಸ್ಯೆ ಅಲ್ಲ. ಇದು ದೇಶದ ಅನೇಕ ಅರಣ್ಯ, ಬುಡಕಟ್ಟು ಪ್ರದೇಶಗಳ ಕಥೆ. ಪ್ರತಿ ಬಾರಿ ಈ ಜನರು ನಡೆದು ಬರಬೇಕು ಅಂದರೆ, ಸಮಸ್ಯೆ ಅವರಲ್ಲ. ಪ್ರಜಾಪ್ರಭುತ್ವದಲ್ಲಿ ಜನರು ರಸ್ತೆ ಹಿಡಿಯಬೇಕಾದ ಸ್ಥಿತಿ ಬರುತ್ತಿದ್ರೆ, ಅದು ವ್ಯವಸ್ಥೆಯ ವೈಫಲ್ಯ. ಪಾಲ್ಘರ್‌ನ ಈ ಪಾದಯಾತ್ರೆ ಒಂದು ಎಚ್ಚರಿಕೆ. ಇದು ಕೇಳಿಸಿಕೊಳ್ಳದ ಧ್ವನಿಗಳ ಕೂಗು. ಈ ಕೂಗಿಗೆ ಕಿವಿಗೊಡದೇ ಹೋದರೆ, ಮುಂದಿನ ದಿನಗಳಲ್ಲಿ ಆ ಧ್ವನಿಗಳು ಇನ್ನೂ ಗಟ್ಟಿಯಾಗಬಹುದು. ಸರ್ಕಾರಗಳು ಈ ಬಾರಿ ಆದರೂ ಅವರ ಸಮಸ್ಯೆಗಳನ್ನ ಕೇಳುತ್ತವೆಯೇ? ಅಥವಾ ಮುಂದಿನ ವರ್ಷ ಮತ್ತೆ ಇದೇ ಜನರು, ಇದೇ ರಸ್ತೆಯಲ್ಲಿ, ಮತ್ತೆ ನಡೆಯಬೇಕಾಗುತ್ತದೆಯೇ? ಮುಂದಿನ ಬಾರಿ ಈ ಜನರು ಮಾತ್ರ ಅಲ್ಲ, ಪ್ರಜಾಪ್ರಭುತ್ವವೂ ರಸ್ತೆ ಹಿಡಿಯಬೇಕಾಗುತ್ತದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR